Reservation of Seats for Students of Mysore State in the Professional Colleges in Bombay and Andhra States.

Q.—1330. SRI V. S. PATIL (Belgaum I).—

Will the Government be pleased to state :—

(*a*) whether any seats have been reserved by the Governments of Bombay and Andhra for the students of the Mysore State in the professional colleges such as Engineering, Medical, Veterinary, etc., in their respective areas ;

(*b*) whether the Karnatak University has forwarded the applications of candidates to the Governments of Bombay and Andhra ; if so, when and if not, why ;

(*c*) the number of applications that were received by the Mysore University or the Director of Animal Husbandry and Veterinary Services, Bangalore, for that purpose ;

(*d*) the number of them that have been forwarded by the said authorities to the Governments of Bombay and Andhra, and when ?

A.—SRI V. VENKATAPPA (Minister for Education).—

(*a*) Yes.

(*b*) Applications from qualified candidates for the reserved seats in the Colleges were invited by the respective State Governments and selection of candidates was made by them except in the case of the Veterinary College, Bombay, for which applications were to be addressed to the Director of Veterinary and Animal Husbandry Services in Mysore, who was authorised to scrutinise the applications and select candidates of the Karnatak University. The question of the Karnatak University forwarding the applications did not therefore arise.

(*c*) Thirty-seven applications were received by the Director of Veterinary and Animal Husbandry Services, Bangalore, for admission to the Veterinary College, Bombay.

(*d*) In view of the reply to clause (*b*), the question of forwarding applications to the Governments of Bombay and Andhra did not arise except in the case of the Bombay Veterinary College for which the Director of Veterinary and Animal Husbandry Services, Bangalore, selected 7 students for the seats reserved for Bombay Karnatak and 7 candidates were placed in the waiting list. The applications of these candidates were forwarded to the Principal, Veterinary College, Bombay on 3rd July 1957. No applications were received by the Director of Veterinary and Animal Husbandry Services, Bangalore, from candidates of the Hyderabad Karnatak area for the Veterinary College in Andhra Pradesh. One application from the former Mysore State was recommended.

Collection of Charges from Patients in Government Hospitals in Sorab Taluk.

Q.—1579. SRI D. MOOKAPPA (Sagar).—

Will the Government be pleased to state :—

(*a*) whether there is any provision for collection of charges from patients in dispensaries allocated to a health centre ;

(*b*) whether they have received any petition to the effect that charges are being collected from patients in the hospital at Olavi, Olavi hobli, Sorab taluk ?

A.—SRI R. M. PATIL (Minister for Health).—

(*a*) No.

(*b*) Yes.

REPORT OF THE MYSORE TENANCY AND AGRICULTURAL LAND LAWS COMMITTEE.

(Discussion continued)

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಇದರ ಚರ್ಚೆಯನ್ನು ಎಷ್ಟು ಹೊತ್ತಿನವರೆಗೆ ನಡೆಸುತ್ತೀರಿ, ಎಷ್ಟು ಜನರು ಮಾತನಾಡುವವರಿದ್ದಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಕಾಲವನ್ನು ನಿರ್ದಿಷ್ಟವಾಗಿ ನಿಗದಿ ಮಾಡಿಲ್ಲ. ಶನಿವಾರ ಸಾಮಾನ್ಯವಾಗಿ ಹನ್ನೆರಡೂವರೆಗಂಟೆಯವರೆಗೆ ಸಭೆ ಕೂಡುವದು ಗೂಡಿ ಎಂಬುದು ತಮಗೆ ಗೊತ್ತಿದೆ. ಸಾಮಾನ್ಯವಾಗಿ ಸದಸ್ಯರು ಹದಿನೈದರಿಂದ ಇಪ್ಪತ್ತು ನಿಮಿಷಗಳವರೆಗೆ ಮಾತನಾಡಿ ಮುಗಿಸಬೇಕೆಂದು ನಾನಾಗಲೇ ವಿನಂತಿ ಮಾಡಿಕೊಂಡಿದ್ದೇನೆ. ನಾಳೆ ಬಜೆಟ್ ಮೇಲಿನ ಚರ್ಚೆ ಪ್ರಾರಂಭವಾದರೆ, ಆ ಕಾಲದಲ್ಲಿಯೂ ಈ ವಿಷಯವನ್ನು ಮಾತನಾಡಬಹುದು.

Sri A. R. PANCHAGAVI.—(Gokak II) I rise to a point of order. I see several Members going here and there when the Chair was standing.

Mr. SPEAKER.—Of course the point of order is correct. When the Chair stands ordinary parliamentary etiquette requires that no other Member should stand or move about. But every now and then I cannot go on dinning into the ears of Members about these things. It is much better that Members will take them into consideration and comply with the requirements.

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಈ ವರದಿಯ ಬಗ್ಗೆ ಈಗಾಗಲೇ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ, ಅವರಲ್ಲಿ ಕೆಲವರು ಇದು ಸರಿಯಾಗಿದೆಯೆಂದೂ ಮತ್ತೆ ಕೆಲವರು ಇನ್ನೂ ಉತ್ತಮವಾಗಬೇಕೆಂದೂ ಅಭಿಪ್ರಾಯ ಪಟ್ಟಿದ್ದಾರೆ. ನಾನು ಈ ಜತ್ತಿ ಸಮಿತಿ ವರದಿಯ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡಲಿಚ್ಛಿಸುತ್ತೇನೆ. ನಮ್ಮ ಹೊಸ ಮೈಸೂರು ರಾಜ್ಯಕ್ಕೆ ಅನ್ವಯಿಸುವಂತೆ ತಯಾರಾಗುವ ಜತ್ತಿ ಸಮಿತಿ ವರದ ನಮಗೆಲ್ಲ, ಅದರಲ್ಲಿಯೂ ವಿಶೇಷವಾಗಿ, ಹೈದರಾಬಾದು ಕರ್ನಾಟಕದವರಿಗೆ, ಅಲ್ಲಿ ಹಿಂದೆ ಇದ್ದ ಕಾಯಿದೆಗಿಂತಲೂ ಬಹಳ ಮುಂದುವರಿದ ಹಾಗೂ ಕ್ರಾಂತಿಕಾರಕವಾದ ಸಲಹೆಗಳು ಬಂದು ನಮ್ಮ ಒಕ್ಕಲಿಗರಿಗೆ ಅದರಿಂದ ವಿಶೇಷ ಹಿತವಾಗಿ, ಅವರಿಗೆ ಸರಿಯಾಗಿ ಭೂಮಿ ಸಿಕ್ಕಿ, ಉತ್ಪತ್ತಿ ಹೆಚ್ಚಾಗುತ್ತದೆ ಎಂಬ ಎಣಿಕೆ ಇತ್ತು. ಆದರೆ ಈ ವರದಿಯನ್ನು ಪರಿಷ್ಕಾರವಾಗಿ ನೋಡಿದರೆ, ನಮಗೆ, ಅದರಲ್ಲಿಯೂ ಹೈದರಾಬಾದು ಕರ್ನಾಟಕದ ಜನರಿಗೆ ಈ ವರದಿ ಸಮರ್ಪಕವಾಗಿಲ್ಲವೆಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಹೈದರಾಬಾದು ಕರ್ನಾಟಕದಲ್ಲಿ ಈ ಮುಂಚೆ ಒಂದು ಕಾಯಿದೆಯಾಗಿತ್ತು. ಅದರಿಂದ ನಮ್ಮ ರೈತರಿಗೆ ತೃಪ್ತಿಯಾಗಿತ್ತು. ಈ ಜತ್ತಿ ಸಮಿತಿಯ ವರದಿ ಪ್ರಕಟವಾದ ನಂತರ ನಮ್ಮ ರೈತರು ಅತೃಪ್ತರಾಗಿದ್ದಾರೆ. ಭೂಒಡೆಯರು ತಾವು ಹೆಚ್ಚು ಜಮೀನನ್ನು ಪಡೆಯಬಹುದೆಂದು ಬಹಳ ಸಂತೋಷವಾಗಿದ್ದಾರೆ. ಹೈದರಾಬಾದು ಕಾನೂನಿನ ಪ್ರಕಾರ ಒಂದು ಕುಟುಂಬಕ್ಕೆ ಸುಮಾರು 130 ಎಕರೆ ಭೂಮಿ ಇರುವುದಕ್ಕೆ ಅವಕಾಶವಾಗಿತ್ತು; ಈ ವರದಿಯ ಪ್ರಕಾರ ಸಾಧಾರಣವಾಗಿ 200 ಎಕರೆಗಳಿಗಿಂತಲೂ ಹೆಚ್ಚಾಗಿ ಸಾಮಾನ್ಯ ಕುಟುಂಬಹಿಡುವಳಿಯನ್ನು ಉಳಿಸಿದ್ದಾರೆ. ಐದು ಮಂದಿಗಿಂತ ಹೆಚ್ಚಾಗಿ ಒಂದು ಕುಟುಂಬದಲ್ಲಿದ್ದರೆ, ಇದರ ಎರಡರಷ್ಟು, ಎಂದರೆ, ಸುಮಾರು 400 ಎಕರೆಗೆ ಮೇಲ್ಪಟ್ಟು ಜಮೀನನ್ನುಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಹೈದರಾಬಾದು ಕಾಯಿದೆಯ ಪ್ರಕಾರ 130 ಎಕರೆಗಳನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಭೂಒಡೆಯರು ಉಳಿಸಿಕೊಂಡು ಬಾಕಿ ಉಳಿದ ಜಮೀನನ್ನು ರೈತರಿಗೆ ಗೇಣಿರೂಪವಾಗಿ ಕೊಡುತ್ತಾ ಬಂದಿದ್ದಾರೆ. ಕೆಲವು ಭೂಮಿಯನ್ನು ಮಾರಾಟ ಕೂಡ ಮಾಡಿದ್ದಾರೆ. ಆದರೆ ಈ ವರದಿಯ ಪ್ರಕಾರ ಮಾಡುವ ಕಾಯಿದೆಯಿಂದ ಇನ್ನು ಮುಂದೆ, ರೈತರಲ್ಲಿರತಕ್ಕ ಭೂಮಿಯನ್ನು ಮಾಲೀಕರು ಪುನಃ ಬಿಡಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಹಾಗಾಗುತ್ತದೆ. ಆದುದರಿಂದ ನಮ್ಮ ಹೈದರಾಬಾದು ಕರ್ನಾಟಕಕ್ಕೆ ಇದು ಅಷ್ಟು ಸರಿಯಲ್ಲ, ಇದರಿಂದ ಭೂಮಿ ಇದ್ದವರು ಇನ್ನೂ ಹೆಚ್ಚಿನ ಭೂಮಿಯನ್ನು ಕೊಂಡುಕೊಳ್ಳುವುದಕ್ಕೂ ರೈತರಿಂದ ಬಿಡಿಸಿಕೊಳ್ಳುವುದಕ್ಕೂ ಅವಕಾಶವಾಗುತ್ತದೆಂದು ನನ್ನ ಅಭಿಪ್ರಾಯ.

ಡಾ॥ ಆರ್. ನಾಗನಗೌಡ (ಹೊಸಪೇಟೆ).—ನಾನೂರು ಎಕರೆಯನ್ನು ಒಂದು ಕುಟುಂಬ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದರು, ಅದನ್ನು ಸ್ವಲ್ಪ ವಿಶದೀಕರಿಸಿದರೆ ತಿಳಿದುಕೊಳ್ಳಲು ಸದಸ್ಯರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಇ. ಪುಂಡಲೀಕಪ್ಪ.—ನನ್ನ ಲೆಕ್ಕದ ಪ್ರಕಾರ ಸಾಧಾರಣವಾಗಿ ಒಂದು ಎಕರೆಗೆ ಮೂರು ಪಲ್ಲ ಕಾಳು ಬರುತ್ತದೆ. ಈ ಆಧಾರದಮೇಲೆ ಲೆಕ್ಕ ಹಾಕಿದರೆ ಒಂದು ಕುಟುಂಬ ಹಿಡುವಳಿ 216 ಎಕರೆ ಭೂಮಿಯಾಗುತ್ತದೆ. ಒಂದು ಕುಟುಂಬದಲ್ಲಿ ಐದು ಜನಕ್ಕೆ ಮೇಲ್ಪಟ್ಟಿದ್ದರೆ 432 ಎಕರೆಯಷ್ಟು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಮ್ಮಲ್ಲಿ ಎಕರೆಗೆ ಮೂರು ಪಲ್ಲ ಉತ್ಪತ್ತಿ ಎಂದಿಟ್ಟಿದ್ದೇವೆ. ಈ ದೃಷ್ಟಿಯಿಂದ ನಮ್ಮಲ್ಲಿ ಭೂಮಿಯ ಪ್ರಮಾಣವನ್ನು ನಿರ್ಧಾರಮಾಡಿದ್ದೇವೆಂದು ಹೇಳಬಯಸುತ್ತೇನೆ. ನಮ್ಮ ಹೈದರಾಬಾದು ಕರ್ನಾಟಕದಲ್ಲಿ ಲೆಕ್ಕ ಹಾಕುವ ರೀತಿಯನ್ನು ಸಭೆಯ ಮುಂದಿಡುತ್ತಿದ್ದೇನೆ. ಈ ಸಮಿತಿಯ ವರದಿಯ ಪ್ರಕಾರ ಮಸೂದೆಯನ್ನು ತಯಾರು ಮಾಡಿದರೆ, ಕರೆ ಹೇಳಬೇಕೆಂದರೆ, ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ, ಮಾಲೀಕರಿಗೂ ರೈತರಿಗೂ ಗೊಂದಲವಾಗುತ್ತದೆ. ಭೂಮಿ ಚೆನ್ನಾಗಿ ಬೆಳೆಯುತ್ತದೆಂದು ಭೂಮಾಲೀಕರು ತಿಳಿದುಕೊಂಡಿರುವದರಿಂದ ಖರೀದಿಗೆ ತಗೆದುಕೊಳ್ಳಬೇಕೆಂದು ಮಾಡಿದ್ದಾರೆ. ಆ ರೀತಿ ಖರೀದಿ ತೆಗೆದುಕೊಳ್ಳಲಿಕ್ಕೆ ಕಾನೂನು ಪ್ರಕಾರ ಆಸ್ಪದವಿಲ್ಲ. ಹೈದ್ರಾಬಾದ್ ಟೆನನ್ಸಿ ಕಾನೂನಿನಲ್ಲಿ ಹೀಗೆ ಇದೆ. ಐದು ಜನರ ಒಂದು ಕುಟುಂಬದಿಂದ ಸಾಗುವಳಿ ಮಾಡಲ್ಪಡುವ ಹಾಗೂ ಒಟ್ಟು ವಾರ್ಷಿಕ 800 ರೂಪಾಯಿ ಆದಾಯವನ್ನು ಕೊಡುವಂಥ ಒಂದು ಭೂಮಿಯ ವಿಸ್ತಾರಕ್ಕೆ "ಕುಟುಂಬ ಹಿಡುವಳಿ" ಎಂದು ವ್ಯಾಖ್ಯೆ ಮಾಡಲಾಗಿದೆ. ಭೂಸುಧಾರಣೆಯ ಸಲುವಾಗಿ ನೇಮಕವಾಗಿದ್ದ ಕಮಿಷನ್ ಅವರು ಈ ಪ್ರಮಾಣವನ್ನು ಭೂಮಿಯ ಗುಣದಮೇಲೆ ಗೊತ್ತುಮಾಡಿದ್ದಾರೆ. ಆದ್ದರಿಂದ 800 ರೂಪಾಯಿ ಎಂದು ನಿರ್ಧಾರ ಮಾಡಿದ್ದಾರೆ. ಹೈದ್ರಾಬಾದ್ ಕರ್ನಾಟಕದಲ್ಲಿ ಭೂಮಾಲೀಕರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಅವರು ಭೂಮಿಯ ಸಾಗುವಳಿಯ ಬಗ್ಗೆ ಅಷ್ಟು ವಿಶೇಷ ಮನಸ್ಸು ಹಾಕುವುದಿಲ್ಲ. ಯಾಕೆಂದರೆ ವ್ಯಾಪಾರದಲ್ಲಿ ನೌಕರಿಯಲ್ಲಿ ಅವರಿಗೆ ಹೆಚ್ಚು ಉತ್ಪತ್ತಿ

(ಶ್ರೀ ಇ. ಕಂಡಲೀಕಪ್ಪ)

ಬರುತ್ತದೆ. 130 ಎಕರೆ ಭೂಮಿಯನ್ನು ಉಳಿಸಿಕೊಳ್ಳಲು ನಾಲ್ಕಾರು ಜನರ ಹೆಸರಿನಲ್ಲಿ ಸ್ವಂತ ಸಾಗುವಳಿ ಮಾಡುತ್ತೇವೆ ದು ಹೇಳಿ ಬರೆಸಿಕೊಂಡಿದ್ದಾರೆ. ಅದೇ ರೀತಿಯಾಗಿ 300-400 ಎಕರೆ ಭೂಮಿಯನ್ನು ಹಿಂದಕ್ಕೆ ಇಟ್ಟುಕೊಂಡವರೂ ಸಹ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ರೀತಿ ಹೆಚ್ಚು ಜನರ ಹೆಸರುಗಳನ್ನು ಬರೆಯಿಸಿ ಭೂಮಿಯನ್ನು ಉಳಿಸಿಕೊಂಡಿದ್ದಾರೆ. ಈ ಹೊಸ ಕಾನೂನು ಅವರಿಗೆ ಅನುಕೂಲವಾಗ ತ್ತದೆ. ಆದಕಾರಣ ಭೂಮಿ ಇಲ್ಲದವರಿಗೆ ಭೂಮಿ ಸಿಕ್ಕುತ್ತದೆಂದು ನನಗೆ ಅನ್ನಿಸುವದಿಲ್ಲ. ಸದ ಕ್ಕೆ ದೇಶದಲ್ಲಿ ಆಹಾರಧಾನ್ಯ ಉತ್ಪತ್ತಿ ಹೆಚ್ಚಾಗಬೇಕಾಗಿದೆ. ಹೀಗೆ ಆಗಬೇಕಾದರೆ ಇದಕ್ಕಾಗಿ ಭೂಮಿಯನ್ನು ಸರಿಯಾಗಿ ಸಾಗುವಳಿಮಾಡಬೇಕು. ಒಬ್ಬರಲ್ಲಿಯೇ ಎಲ್ಲಾ ಭೂಮಿ ಇರಬಾರದು. ಮುಂಜಾನೆಯಿಂದ ಸಂಜೆಯವರೆಗೆ ಬೆವರು ಸುರಿಸಿ ದುಡಿಯತಕ್ಕಂಥ ಬಡ ರೈತರಿಗೆ ಸಾಗುವಳಿ ಮಾಡುವದಕ್ಕೆ ಭೂಮಿ ಸಿಗಬೇಕು. ಅಂಥವರು ಶ್ರಮಪಟ್ಟು ಆಸ್ಥೆಯಿಂದ ದುಡಿಯುವುದರಿಂದ ಆಹಾರ ಉತ್ಪತ್ತಿ ಹೆಚ್ಚಾಗುತ್ತದೆ. ಕೆಲಸ ಮಾಡಲಾರದವರ ಹತ್ತಿರ ಭೂಮಿ ಇರಬಾರದು. ಈ ಜತ್ತಿ ಸಮಿತಿ ವರದಿ ನೋಡಿದರೆ ಇದರ ಪ್ರಕಾರ ಭೂಮಾಲೀಕರಿಗೆ ಹೆಚ್ಚು ಅನುಕೂಲವಾಗುತ್ತದೆಯೇ ಹೊರತು ರೈತರಿಗೆ ಹೆಚ್ಚು ಅನುಕೂಲವಾಗುವುದಿಲ್ಲ ಎಂದು ನನಗೆ ತಿಳಿದಮಟ್ಟಿಗೆ ಹೇಳುತ್ತೇನೆ. ಆದಕಾರಣ ಈ ವಿಷಯವನ್ನು ಇನ್ನೊಮ್ಮೆ ಪೂರ್ವಾಪರವಾಗಿ ಸಂಪೂರ್ಣ ವಿಚಾರಮಾಡಿ, ಮುಂಜಾನೆ ಎಂಟು ಗಂಟೆಯಿಂದ ಸಂಜೆಯ ಆರು ಗಂಟೆಯವರೆಗೆ ಕಷ್ಟಪಟ್ಟು ದುಡಿಯುವಂಥಾ ರೈತರಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಅಂಥಾ ರೈತರಿಗೆ ಭೂಮಿ ಸಿಗುವ ಹಾಗೆ ಮಾಡಬೇಕು. ಭೂಮಾಲೀಕರಿಂದ ರೈತನು ಭೂಮಿಯನ್ನು ಖರೀದಿ ತೆಗೆದುಕೊಳ್ಳಲಿಕ್ಕೆ ಅವನಿಗೆ ಹಣದ ಅನುಕೂಲವಿರುವುದಿಲ್ಲ. ಈ ವಿಚಾರದಲ್ಲಿ ಸಮಿತಿಯ ವರದಿಯು ಅಷ್ಟು ಸರಿಯಾಗಿಲ್ಲವೆಂದು ನನ್ನ ಅಭಿಪ್ರಾಯ. ಭೂಮಿಯಿಂದ ಸರಿಯಾಗಿ ಉತ್ಪತ್ತಿಯಾಗಬೇಕು, ದೇಶದ ಅಭಿವೃದ್ಧಿಯಾಗಬೇಕು ಎಂಬ ಉದ್ದೇಶವನ್ನು ನಾವು ಇಟ್ಟುಕೊಂಡಿದೆ(ವೆ. ಆದರೆ ಬರೀ ಕಾಯಿದೆಯಿಂದ ಈ ಉದ್ದೇಶ ಸಾಧಿಸುವ ಕೆಲಸ ಯಶಸ್ವಿಯಾಗುವುದಿಲ್ಲ. ರೈತನಿಗೆ ಇರುವ ತೊಂದರೆ ಏನು ಎಂಬುದನ್ನು ಮೊದಲು ನಾವು ವಿಚಾರ ಮಾಡಬೇಕು. ರೈತನಿಗೆ ಇರುವ ತೊಂದರೆಗಳನ್ನು ಪರಿಹರಿಸಬೇಕು. ರೈತನಿಗೆ ಎಲ್ಲಾ ಅನುಕೂಲತೆಗಳು ದೊರೆಯುವ ಹಾಗೆ ಮಾಡಬೇಕು. ಆದರೆ ಈ ಜತ್ತಿ ಸಮಿತಿ ವರದಿಯ ಪ್ರಕಾರ ಭೂಮಾಲೀಕರಿಗೆ ಹಿತವಾಗುತ್ತದೆಯೇ ವಿನಾ ರೈತರಿಗೆ ಏನೂ ಹಿತವಿಲ್ಲ. ಹೈದ್ರಾಬಾದ್ ಕಾನೂನು ಪ್ರಕಾರ ವಾರ್ಷಿಕ ಉತ್ಪನ್ನದಮೇಲೆ 1,200-800 ರೂಪಾಯಿ ಎಂದು ಇದ್ದುದು ರೈತ ಮತ್ತು ಮಾಲೀಕ ಇಬ್ಬರಿಗೂ ಅನುಕೂಲ ಹಾಗೂ ಹಿತಕರವಾಗಿತ್ತು. ಭೂಸಮಸ್ಯೆಯನ್ನು ಪರಿಹರಿಸುವುದು ಎಂದರೆ ಸಮಾಜ ವಾದಿ ಸಮಾಜ ರಚನೆಯ ಕ್ರಾಂತಿಕಾರಕ ಉದ್ದೇಶವಾಗಿದೆ. ಈ ದೃಷ್ಟಿಯಿಂದ ನಾವು ಪ್ರಗತಿ ಮಾರ್ಗದಲ್ಲಿ ಮುಂದೆ ಹೆಜ್ಜೆ ಇಡುತ್ತಾ ಹೋಗಬೇಕೇ ಹೊರತು ಹಿಂದೆ ಬೀಳಬಾರದು. ಈಗಾಗಲೇ ಮುಂಬಯಿ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜಾರಿಯಲ್ಲಿರುವ ಗೇಣಿಶಾಸನವನ್ನು ನೋಡಿದರೆ, ಈ ಜತ್ತಿ ಸಮಿತಿಯ ವರದಿಯ ಪ್ರಕಾರ ಕಾನೂನು ಮಾಡುವುದಾದರೆ ನಾವು ಹಿಂದೆ ಹೋಗುತ್ತಿದ್ದೇವೆ ಎಂದು ಹೇಳಬೇಕಾಗುತ್ತದೆ. ಇನ್ನು ಮುಂದೆ ಬರತಕ್ಕ ಈ ಕಾನೂನಿನ ಬಗ್ಗೆ ರೈತರು ನಮ್ಮನ್ನು ಕೇಳಿದರೆ ನಾವು ಅವರಿಗೆ ಏನು ಹೇಳೋಣ? ಹಿಂದಿದ್ದ ಕಾನೂನೇ ಅನುಕೂಲವಾಗಿತ್ತು, ಈ ಹೊಸ ಕಾನೂನಿನಿಂದ ಭೂಮಾಲೀಕರಿಗೆ ಅನುಕೂಲವಾಗುತ್ತದೆ. ಆದಕಾರಣ ಸರಿಯಾಗಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಹೊಸ ಕಾನೂನನ್ನು ರಚಿಸಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಶೇಕಡಾ 80ರಷ್ಟು ಜನ ರೈತರು ಸಾಲಗಾರರಾಗಿದ್ದಾರೆ. ಭೂಮಿಯನ್ನು ಕೊಂಡುಕೊಳ್ಳಲು ಅವರ ಹತ್ತಿರ ಹಣವಿಲ್ಲ. ಆದರೆ ಭೂ ಒಡೆಯರು ವ್ಯಾಪಾರ ನೌಕರಿಮಾಡಿಕೊಂಡು ಚೆನ್ನಾಗಿದ್ದಾರೆ. ರೈತರ ಪರಿಸ್ಥಿತಿ ಚೆನ್ನಾಗಿಲ್ಲ. ಆದಕಾರಣ ಹೆಚ್ಚಾಗಿ ರೈತನಿಗೆ ಎಲ್ಲಾ ಸೌಕರ್ಯ, ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಈ ರೀತಿಯಾಗಿ ಎಲ್ಲಾ ಸೌಲಭ್ಯಗಳನ್ನು ರೈತನಿಗೆ ಒದಗಿಸಿಕೊಟ್ಟು ಇಷ್ಟು ಭೂಮಿಯಲ್ಲಿ ಇಂತಿಷ್ಟು ಬೆಳೆ ರೈತನು ಕಡ್ಡಾಯವಾಗಿ ಬೆಳೆಯಲೇ ಬೇಕೆಂದು ನಿರ್ಬಂಧ ಹಾಕಬೇಕು. ಅಂದರೆ ದೇಶದಲ್ಲಿ ಆಹಾರಧಾನ್ಯ ಉತ್ಪತ್ತಿ ತಾನಾಗಿಯೇ ಜಾಸ್ತಿಯಾಗುತ್ತದೆ.

ಇನ್ನೊಂದು ವಿಷಯ. ಈಗ ಸಮಿತಿಯು ಶಿಫಾರಸುಮಾಡಿದ ಪ್ರಕಾರ ಕುಟುಂಬ ಹಿಡುವಳಿ ವಾರ್ಷಿಕ ಉತ್ಪನ್ನದ ಪ್ರಮಾಣ 1,200 ರೂಪಾಯಿ ಎಂದು ಇರುವುದು ಅದಕ್ಕಿಂತ ಕಡಿಮೆಯಾಗಬೇಕು, ಅಂದರೆ ಹೈದ್ರಾಬಾದ್ ಕಾನೂನಿನಲ್ಲಿ ಇರುವಹಾಗೆ 800 ರೂಪಾಯಿ ಕುಟುಂಬ ಹಿಡುವಳಿಯ ವಾರ್ಷಿಕ ಉತ್ಪನ್ನದ ಪರಿಮಿತಿಯನ್ನು ಗೊತ್ತುಮಾಡಬೇಕು. ಇಷ್ಟು ಹೇಳಿ ನನ್ನ ಭಾಷಣವನ್ನು ನಾನು ಮುಗಿಸುತ್ತೇನೆ.

The House adjourned for Lunch at Ten of the Clock and re-assembled at Thirty-eight Minutes past Ten of the Clock.

[MR. DEPUTY SPEAKER in the Chair]

SRI H. C. LINGA REDDY (Malur).—Mr. Speaker, Sir, the submission of the Report of the Mysore Tenancy Agricultural Land Laws Committee about two or three months ago has created a stir as it were in the political atmosphere of the new State of Mysore. It opens out almost a new chapter in the history of the land reforms of the State. The pace of progress of land reforms in this State has been rather tardy and even the Central Agrarian Land Reforms Committee as well as the Planning Commission have been writing to the State authorities that the pace of progress is to be quickened. Several measures referred to in the Gundappa

Gowda Land Reforms Committee and the Jatti Committee Report have been enacted as laws. The Tenancy Act of 1952, I think was the first piece of land legislation and it made a very mild attempt at fixation of fair rent and security of tenure and subsequently there was agitation for the introduction of further land reforms and a Bill relating to tenancy had been introduced on the floor of the Legislature during the year 1954 but before it could be completely made law, the Legislature was dissolved and general elections were held. On the basis of the recommendations made and the manifestoes issued by the All India Congress Committee, elections were held and it was t ought that a further instalment of land reforms would be introduced very early. But, the Government thought it fit to appoint a Committee and it is really very noteworthy that the Committee has gone into the whole question and has reviewed the whole land legislation in the several parts of the new Mysore State. They really deserve congratulations. In this compendious report, they have reviewed the land legislation of Hyderabad, Bombay and Mysore and I should say that they have adopted a golden mean between the laws of the old Mysore and the laws prevalent in Hyderabad and Bombay Karnatakas. A few points can be referred to and they are, security of tenure, fixation of fair rent, right of purchase of land by the tenants, right of resumption of land by the landlord, and ceilings. Of course, the concept of ceilings was new to the old Mysore while the other concepts had been to some extent implemented in the old Mysore. In the new integrated areas specially in Bombay Karnatak, the law was about to come into being; even the Tillers' Day had been announced. But, unfortunately when the new State was formed, our State suspended the operation of the new law. It is nearly a year or more and we are still discussing whether ceilings should be applied and whether there should be land reforms at all on the lines recommended by the Jatti Committee. Several members of this House as well as the Upper House and also outside public have been giving their views. When we are discussing a report of this kind, especially land reforms which are so important today and which will have a very important bearing on the economic and agricultural situation of the country, it is necessary for us to remember that our ryots are not properly organised, to voice forth their feelings. We see several Agricultural Associations dominated by vested interests and Zamindars who are so well organised giving memoranda, making representations, calling for conferences and asking us not to go forward with the recommendations made by the Jatti Committee. After all, as I said the recommendations contained in the Jatti Committee will not go as far as land reforms prevailing in Hyderabad and Bombay. It is said that Mysore State is a model State and that it has been setting an example in many respects to other parts of India. But in land reforms, I am afraid, we are not sufficiently progressive. We talk of principle, standards and concepts, but we are not in a position to implement them. I am afraid there is more of talk than of practice of these principles. Some friends even went to the extent of saying that these land reforms are not called for at all, in as much as it is a very small percentage of tenants that is affected. They are telling, we have a peasant proprietorship in the State and for the sake of a few tenants why this hubub, why this revolution? I have to bring it to the notice of the House that nearly one fourth of the land today is in the possession of the tenants. The total area of cultivable land is 267.8 lakhs acres and 206.4 lakhs of acres is under personal cultivation. The land under tenants' cultivation is 61.4 lakhs acres or 22.95 per cent of the land. The tenants class will be 9.3 per cent of the total population and in addition to the tenants, there are the agricultural labourers and that will be 10.9 per cent and in terms of percentage tenants-cultivators will be 13 per cent. Twenty-five per cent on the whole will be the people working on lands and these

(SRI H. C. LINGA REDDY)

people today are landless. This shows that a considerable percentage of land and also the peasantry is under tenancy tenures. Though this country is predominantly an agricultural country, we are not growing enough food. The reason is the peasantry has no incentive ; there is the fear of eviction and therefore they are not in a position to put in hard labour or invest any money on the land and raise enough production. From the point of view of sufficient production, increase in the productivity of the lands, it is very necessary that the intermediaries are eliminated and the peasant or the tenant should be enabled to become the owner of the land. The ideal that tiller of the soil is the owner of the soil has been spoken of very much. But, when we come to the point of implementing it, there are all kinds of obstacles. Therefore, there is enough need for progressive land reforms in the State.

Many farmers coming from Bombay, Hyderabad and other areas are complaining that these recommendations do not go far enough. Some of the members from old Mysore have been crying hoarse that the acceptance of the recommendations as embodied in the report will affect seriously the agricultural economy of Mysore State. It is not so at all. We have to remember that we have accepted the principle of socialistic pattern of society. When we have accepted that principle, it is very necessary and incumbent that we should try to implement it. My friends argued that we have not applied this principle in other sectors at all and so why accept it in this sphere ? My submission is that attempts are made in all sectors for the elimination of disparities and we have to take them one by one. We have to begin somewhere. All of a sudden we cannot begin in all the spheres. We are beginning with the agricultural sector and we will go to the industrial sector and other sectors later on. Therefore, there is nothing wrong in making a beginning with the agricultural sector and later on going to the industrial sector and other sectors. Those of my friends who suggested that this reform embodying the principle of ceiling on income in the agricultural sector has not suggested anything as to how best and how quickly elimination of disparities in other spheres has to be done. Instead of making those suggestions, to say that we have not applied the principle of socialistic pattern of society to other sectors is not arguing correctly and logically. We have to begin somewhere if not today, some time later on. Therefore, we can as well begin with the agricultural sector and later on go other sectors. After all, Hon'ble Members know that several attempts are made in the matter of bridging the gulf. There is the sales-tax and income-tax imposed in other sectors and there is also the principle of nationalisation applied in other spheres. Therefore, where is the harm if we impose a ceiling on income from land ? With regard to family holding, an income of Rs. 1,200 per annum has been fixed for a family of five members. This, I consider, is not sufficient. This will work out to Rs. 20 per individual per month. This will hardly suffice. Therefore, I suggest that at least a rupee a day per individual should be given which will work out to Rs. 1,800 for a family. A basic holding is the minimum extent of land which would allow profitable cultivation for a family and the income for a basic holding has been fixed at Rs. 400 only. I consider this to be very low and I feel that this should be raised to at least at Rs. 600. With regard to implementation, the Committee seems to have taken for granted that it will be very easy. I may say that in this State it will not at all be easy to implement it because there are jodi inam villages. We have passed the Inam Abolition Act nearly 4 to 5 years ago and the Religious and Charitable Inam Abolition Act long ago. There are nearly 2,100 Jodi Villages. We have heard so often from the Government that the completion of the implementation of the Inam Abolition Act will take nearly 10 years. Out of 2,100 Jodi Villages only about 700 have been surveyed. As many as 1,400 villages still remain

to be surveyed and settled and they want a period of 10 years for the completion of survey and settlement of the remaining Inam Villages which have not been surveyed and settled, and for the completion of the reform of Inam Abolition. We do not know what the Government has done so far with regard to the implementation of the various provisions of the Religious and Charitable Inams Abolition Act. The rules have been framed just a few months ago and the implementation of the Act will take a very long time. Now, the Jatti Committee Report contemplates that the Land Commission that is going to be appointed by the Government will complete the whole process within about 6 months. The family holding has to be settled, the land that is to be resumed by the land owners has to be settled and the land which is not to be resumed by the land owners but which is to be purchased by the tenants has to be settled. A suggestion has been made that the tenants or the owners themselves may declare this within a few months. That will not be easy. Now, when there are so many inam villages which have not been surveyed and settled and when there are disputes as to whether the land belongs to the Jodidar or the tenants and when Government themselves have been saying frequently that all these things will take nearly a period of 10 years for settlement, how can all that is contemplated by the Jatti Committee be completed within 6 months? Therefore, I feel that at least so far as Inam Villages are concerned, the Land Commission will not be in a position to determine the nature of tenancies or tenures. There will be disputes as to the ownership of land between the tenants and the land owners. Therefore, how will it be possible for the Land Commission to declare the family holding in respect of lands that are to be resumed by the owners and in respect of non-resumable lands which are to be purchased by the tenants? I wish the Committee had paid sufficient attention to this aspect of the matter and made a practical suggestion. That has not been done by the Committee. Therefore, I appeal to the Government to see that the several pieces of legislation such as the Personal and Miscellaneous Inams Abolition Act and the Religious and Charitable Inams Abolition Act be implemented very early so that we may smoothen the way for the implementation of the reforms embodied in the Jatti Committee Report.

With regard to exemptions, we see that some recommendations have been made by the Committee, but they have failed to exempt certain pieces of land very necessary for the agriculturists for the purpose of grazing their cattle. Cattle wealth is very important. When they recommend ceiling, I wish they had recommended that at least about 10 to 15 acres of land should be left to be used as grazing medow for the cattle.

And that the committee has not done. I hope the Government will bear in mind this point and suitably amend it. I want that provision should be made for each family.

11 A.M.

With regard to compensation to be paid to the owners of land, the committee has suggested 15 per cent of the new income to be paid either in lumpsum or by instalments, to the owner of the land when land is resumed either by the Government or by the tenant when the tenant purchases the land. My submission is that this will be a very heavy sum. Supposing there is an income of Rs. 200 from one acre of land every year, 15 times of that net income will be Rs.3,00 ; and to pay Rs. 3000 for a piece of land that has been in the possession of the tenant for a long time during which he will have made considerable improvements to the land in question, is something which will be abnormally high and it has to be reduced. Fifteen times the net income to be paid as compensation will be very heavy.

Dr. R. NAGAN GOWDA—To what extent do you want it to be reduced?

Sri H. C. LINGA REDDY.—I want that it should be reduced by at least 50 per cent.

Dr. R. NAGAN GOWDA.—If the Hon'ble Member would yield, I would

(DR. R. NAGAN GOWDA)

like to ask a question. If there is a capital investment of Rs. 15,000 and if it yields Rs. 200 every year, the income from that will be 20 per cent. Is there any industry where such a huge percentage of income is derived.

Sri H. C. LINGA REDDY.—Where the investment is to the extent of Rs. 15,000, the net income will not be only Rs. 200 per annum. I am speaking of the ordinary land where no such heavy investment will have been made. We know that generally heavy investments are not made on agricultural lands. My Hon'ble friend, Dr. Nagan Gowda is speaking of exceptional cases where heavy investments are made. I am referring only to very average cases.

There is no reference in the Jatti Committee Report with regard to some compensation to be paid to the tenants themselves at the time of resumption of the land by the owner for the improvement effected by them. Some provision has to be made at least at the time of framing the Bill by the Government with regard to the improvements effected by the tenants.

Again Sir, it was pointed by those who argued against some of the important recommendations embodied in the Committee report, that the production will fall, that there will be fragmentation of land and that the Committee has not made any definite recommendation with regard to the facilities that have got to be made available to the tenants. Therefore with a view to give a tempo in the matter of production from land, it is very necessary that a chapter with regard to facilities that have to be given to the peasant proprietors has to be added. An agricultural Bank, Crop insurance Scheme and co-operative farms, of course co-operative farming is referred to in passing in the Report. But no definite scheme has not been suggested by the Members of the Committee; and if there should be marketing facilities for the produce grown by the peasants and if there should be crop insurance and proper facilities with regard to manures, seeds, with regard to supply of bullocks and improved agricultural implements—if these facilities are made available to the tenants and also sufficient credit facilities are also made available, I must say that the productivity of the land will increase and there will be enough food for all. There is absolutely no doubt why the peasant proprietor also should not make his own contribution towards the increase in food. Therefore, Sir, on the whole, the report is sufficiently progressive and revolutionary in character. I am sure the implementation of the several recommendations made in the report will certainly tend towards increase in production, towards the elimination of inequalities between the rich and the poor with regard to the land.

With these few observations, I conclude my speech.

[Sri BALWANT RAO (Bhalki) began to speak in Hindi].

Sri H. C. LINGA REDDY.—I hear that the Hon'ble Member knows English. If he can speak in English, it will be of benefit to us.

Mr. DEPUTY SPEAKER.—He has already started in Hindi.

Sri C. J. MUCKANNAPPA (Gubbi).—He can change the language with your permission, Sir.

Sri BALWANT RAO.—I cannot express my ideas in English as effectively as I can express in Hindi.

[Spoke in Hindi. His speech is printed in the appendix number to this volume.]

* ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಸರಕಾರದವರು ಜಮೀನು ವಿಷಯವಾಗಿ ರಿಫಾರ್ಮ್ಸ್ ಮಾಡುವುದಕ್ಕೋಸ್ಕರ ನೇಮಿಸಿರತಕ್ಕಂಥ ಈ ಜತ್ತಿ ಸಮಿತಿಯವರು ಒಪ್ಪಿಸಿದ ವರದಿ ಒಂದು ವಿಧವಾಗಿ ಶ್ಲಾಘನೀಯವಾಗಿದೆ. ಒಂದು ವಿಧದಲ್ಲಿ ಜಮೀನಿನ ಸಮಸ್ಯೆಗಳೆಲ್ಲವನ್ನೂ ಸಂಪೂರ್ಣವಾಗಿ ಬಗೆಹರಿಸುವುದಕ್ಕೆ ಈ ಸಮಿತಿಯ ವರದಿಯಲ್ಲಿ ನಮೂದಿಸಿರತಕ್ಕ ಸಲಹೆಗಳಿಂದ ಸಾಧ್ಯವೇ ಎಂಬುವನ್ನು ಪೂರ್ಣವಾಗಿ ವಿಚಾರಮಾಡಿ ನೋಡಿದರೆ ಸಂಪೂರ್ಣವಾಗಿ ಬಗೆಹರಿಸುವುದಕ್ಕೆ ಸಾಧ್ಯವಾಗಲಾರದು ಎಂದು ನನಗೆ ಅನ್ನಿಸುತ್ತದೆ. ಬಹುಶಃ ವಸ್ತುಸ್ಥಿತಿಯನ್ನು ಅರಿತು ಈಗಿನ ಕಾಲಕ್ಕೆ ಬೇಕಾದಷ್ಟು ಸಲಹೆಗಳನ್ನು ಸಮಿತಿಯವರು ಮಾಡಿದ್ದಾರೆ. ಜಮೀನಿನ ಅನುಭವವಿರತಕ್ಕಂಥವರು, ವ್ಯವಸಾಯದ ಅನುಭವ ಇರತಕ್ಕಂಥಾ ಮಾನ್ಯ ಸದಸ್ಯರು ಈ ಸಮಿತಿಯಲ್ಲಿ ಕೆಲಸ ಮಾಡಿದ್ದಾರೆ. ಸಾಧಾರಣವಾಗಿ ಎಲ್ಲಾ ಅಭಿಪ್ರಾಯ

ಗಳನ್ನೂ ಕ್ರೋಡೀಕರಿಸಿ, ಈಗಿನ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಯಾವ ರೀತಿಯಲ್ಲಿ reforms ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರಬಹುದು ಎಂಬುದನ್ನು ಗಮನದಲ್ಲಿಟ್ಟುಕೊಂಡು, ಈಗಿನ ಪ್ರಜಾಪ್ರಭುತ್ವ ಅಥವ democratic system, party system of Government ಪದ್ಧತಿಯಲ್ಲಿ ನಡೆಯುತ್ತಿರುವ ಆಡಳಿತ ವ್ಯವಸ್ಥೆಯಲ್ಲಿ ಎಷ್ಟರಮಟ್ಟಿಗೆ ಈ ಸಲಹೆಗಳನ್ನು ಕಾರ್ಯರೂಪದಲ್ಲಿ ತರಬಹುದು ಎಂಬುದನ್ನು ಗಮನದಲ್ಲಿ ತೆಗೆದುಕೊಂಡು ಸಮಿತಿಯು ವರದಿಯಲ್ಲಿ ಸುಧಾರಣೆಗಳನ್ನು ನಮೂದು ಮಾಡಿದ್ದಾರೆ. ಈ ರೀತಿಯಾಗಿ ನಮೂದು ಮಾಡಿರತಕ್ಕ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ ಧ್ಯೇಯ ಧೋರಣೆಗಳು ಏನು ಎಂಬುದನ್ನು ಸಮಿತಿಯವರು ಗಮನದಲ್ಲಿಟ್ಟುಕೊಂಡಿದ್ದಾರೆ. ಅದರ ಜೊತೆಗೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾಗೂ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಇರುವಹಾಗೆ ಯಾವ ಗುರಿ ಸಾಧನೆ ಮಾಡಬೇಕು, ಯಾವ ರೀತಿಯಾಗಿ land reforms ಮಾಡಬೇಕು ಎಂದು ನಮೂದು ಮಾಡಿದ್ದನ್ನು ಗಮನದಲ್ಲಿಟ್ಟುಕೊಂಡು ಈ ವರದಿಯನ್ನು ಬರೆದಿದ್ದಾರೆ. ಪಾಂಚವಾರ್ಷಿಕ ಯೋಜನೆಯಲ್ಲಿರುವ ಸಲಹೆಗಳನ್ನೇ ಈ ವರದಿಯಲ್ಲಿ ಒಂದೊಂದು ಕಡೆ copy ಮಾಡಿ ಇಟ್ಟಿದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದ್ದಾರೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧು ಆಗಿದ್ದುದು ಸಮಿತಿಗೂ ಸಹ ಸರಿಯಾಗಿದೆ ಎಂದು ಕಂಡುಬಂದ ಪಕ್ಷದಲ್ಲಿ ವಸ್ತುಸ್ಥಿತಿಗೆ ಅನುಗುಣವಾಗಿ ಇರುವುದನ್ನು ಸಮಿತಿಯು ವರದಿಯಲ್ಲಿ ಏಕೆ ನಮೂದು ಮಾಡಬಾರದು ? ಎಂಬುದನ್ನು ಯೋಚನೆಮಾಡಬೇಕು. ಆದ್ದರಿಂದ ಇದಕ್ಕೆ ಅಷ್ಟಾಗಿ ಒಂದು ದೊಡ್ಡ ಆಕ್ಷೇಪವೇನೂ ಇಲ್ಲ. ಪಂಚವಾರ್ಷಿಕ

11-30 A.M.

ಯೋಜನೆಯಲ್ಲಿರುವ ಗುರಿಯೇನೆಂದು ತಿಳಿದು ಜತ್ತಿ ಸಮಿತಿ ವರದಿಯನ್ನು ನಾವು ಸ್ವಲ್ಪ ಗಮನಿಸಬೇಕಾಗುತ್ತದೆ. ಕೆಲವು ಮಾನ್ಯ ಸ್ನೇಹಿತರು ಈ ವರದಿಯಲ್ಲಿ ನಮೂದು ಮಾಡಿರತಕ್ಕ ಸುಧಾರಣೆಗಳು ಆಹಾರ ಹೆಚ್ಚಾಗಿ ಬೆಳೆಯುವುದಕ್ಕೆ ಬಹಳ ಧಕ್ಕೆ ತರುತ್ತವೆ, ಹಳ್ಳಿಯಲ್ಲಿ ರೈತರು ಮುಂದೆ ಬರುವುದಕ್ಕೆ ಬಹಳ ತೊಂದರೆಯಾಗುತ್ತದೆ, ಅವರ ಪ್ರಕೃತಿಯನ್ನು ಬಹಳ ಒಗಟು ಮಾಡುತ್ತವೆ ಎಂದು ಇತ್ಯಾದಿ ನಾನಾ ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಅದನ್ನು ಹೇಳುವಾಗ ನನಗೆ ಬಹಳ ವ್ಯಥೆಯಾಯಿತು. ಏಕೆಂದರೆ ಈ ವರದಿಯನ್ನು ಬಹಳಮಟ್ಟಿಗೆ ನಮ್ಮ ಎದುರು ಪಕ್ಷದವರು ಒಪ್ಪಿದ್ದಾರೆ. ಕೆಲವು ವಿಷಯದಲ್ಲಿ ಇದು ಹೆಚ್ಚು ಪ್ರಗತಿದಾಯಕವಾಗಿಲ್ಲವೆಂದು ಟೀಕೆ ಮಾಡುತ್ತಿದ್ದಾರೆ. ಆದರೆ ನಮ್ಮ ಕಾಂಗ್ರೆಸ್ ಪಕ್ಷದಲ್ಲೇನೇ ಈ ವರದಿಯ ಬಗ್ಗೆ ಹೆಚ್ಚು ವಾದ ವಿವಾದಗಳು ಆಗುತ್ತಿರುವಹಾಗೆ ಕಾಣುತ್ತಿದೆ. ಅನೇಕರು ಜಮೀನುದಾರ ಮತ್ತು ಗೇಣಿದಾರರಿಗಿರುವ ಸಂಬಂಧ ಹೋಗಬೇಕು, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭೂಸುಧಾರಣೆ ಬಗ್ಗೆ ಒಂದು ಗುರಿಯನ್ನು ಹೇಳಿದ್ದರೂ ಕೂಡ ಮೂಲಗೇಣಿ ಇರಬೇಕು, ಅದು ಮುಂದುವರೆಯಬೇಕು ಎಂದು ಮಾತನಾಡಿದ್ದಾರೆ. ಇದು ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಜಮೀನು ಸುಧಾರಣೆಯಾಗುವಾಗ ಒಂದು ಮೂಲದಿಂದ ಒಬ್ಬ ಮನುಷ್ಯನು ಇನ್ನೊಬ್ಬನನ್ನು ಶೋಷಣೆಮಾಡುವುದು ಹೋಗಬೇಕು. ಭೂಮಿಯನ್ನು ಒಂದು ಸಾಧನವಾಗಿಟ್ಟುಕೊಂಡು ಒಂದು ಇನ್‌ವೆಸ್ಟ್‌ಮೆಂಟ್ ಎಂದು ಹೇಳುವ ರೀತಿಯಲ್ಲಿಟ್ಟುಕೊಂಡು ಅದರಿಂದ ಸಂಪಾದನೆ ಮಾಡತಕ್ಕ ಒಂದು ಪರಿಸ್ಥಿತಿ ತಪ್ಪಬೇಕು. ಈ ರೀತಿಯಾಗುವುದರಿಂದ ಸಮತಾವಾದ ಸಮಾಜದ ರೀತಿಯ ಸಮಾಜ ರಚನೆ ಮಾಡಬೇಕೆಂದೇನು ಗುರಿಯಿದೆ ಅದನ್ನು ಸಾಧನೆ ಮಾಡಬೇಕಾದರೆ ದೇಶದಲ್ಲಿ ಜನರಲ್ಲಿರುವ ಐಶ್ವರ್ಯದ ಅಂತಸ್ತು ಕಡಮೆಯಾಗಬೇಕು, ಒಂದು ಸಮ ಆಗುತ್ತಾಬರಬೇಕು, ಏರುಪೇರು ಸಾಧ್ಯವಾದಷ್ಟು ಕಡಮೆಯಾಗುತ್ತಾ ಬರಬೇಕು. ಈ ಗುರಿಯನ್ನು ಸಾಧನೆ ಮಾಡಬೇಕಾದರೆ ಶೋಷಣೆ ಹೋಗಬೇಕು. ಒಂದು ಸಮತಾವಾದ ಸಮಾಜ ರಚನೆ ಮಾಡುವುದಕ್ಕೆ ಈ ಸುಧಾರಣೆ ಯಾವ ಹಂತದಲ್ಲಿ ತೆಗೆದುಕೊಂಡು ಹೋದರೆ ಸಾಧ್ಯ ಎಂದು ನೋಡುವುದಾದರೆ ಇದರಲ್ಲಿ ಕೆಲವು ಸೂಚನೆ ನಮಗೆ ದೊರೆಯುತ್ತವೆ. ಈ ಮುಖ್ಯ ಗುರಿಯನ್ನೇ ಮರೆತು ನಮಗೆ ಎಷ್ಟು ಜಮೀನಿರಬೇಕು, ನಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕಾದರೆ, ನಾವು ಸುಖವಾಗಿರಬೇಕಾದರೆ, ಕಾರು ತೆಗೆದುಕೊಂಡು ಓಡಾಡಬೇಕಾದರೆ, ಚುನಾವಣೆಗಳಲ್ಲಿ ಜಯಶೀಲರಾಗಬೇಕಾದರೆ ಹಣ ಇದಕ್ಕೆಲ್ಲಾ ಎಷ್ಟು ಬೇಕಾಗಬಹುದು ಇತ್ಯಾದಿ ಇತ್ಯಾದಿ ಆಶೋತ್ತರಗಳನ್ನಿಟ್ಟುಕೊಂಡು ವಾದ ಮಾಡಿದರೆ ನಾನು ಅವರಲ್ಲಿ ಒಂದು ಪ್ರಶ್ನೆ ಹಾಕಬೇಕಾಗಿದೆ. ಮೈಸೂರು ದೇಶವನ್ನು ತೆಗೆದುಕೊಂಡರೆ 206 ಲಕ್ಷ ಚಿಲ್ಲರೆ ಎಕರೆ ಭೂಮಿ ಸಾಗುವಳಿಯಾಗುತ್ತದೆ. ಅದನ್ನು ವ್ಯವಸಾಯಮಾಡುವ ಸಂಸಾರಗಳು ಎಷ್ಟು, ಹೋಲ್ಡಿಂಗ್ಸ್ ಎಷ್ಟು ಎಂದರೆ 24 ಲಕ್ಷ ಚಿಲ್ಲರೆ ಇವೆ. ಇದರಲ್ಲಿ ಐದು ಎಕರೆಗೆ ಒಳಪಟ್ಟಿರುವ ಹೋಲ್ಡಿಂಗ್ಸ್ ಸಂಖ್ಯೆ 11,65,000 ಇವೆ. ಇನ್ನೂ ಒಂದು ಯೋಚನೆ ಮಾಡಿ, 30 ಎಕರೆಗಳಿಗೆ ಒಳಪಟ್ಟಿರುವ ಜನರೆಷ್ಟಿದ್ದಾರೆ—ಎರಡು ಎಕರೆಯಿರಲಿ ಅಥವಾ ಐದು ಎಕರೆಯಿರಲಿ—ಅಂದರೆ 23 ಲಕ್ಷದಷ್ಟು 30 ಎಕರೆಗೆ ಹಿಡುವಳಿಗೆ ಒಳಪಟ್ಟಿರುವ ಹೋಲ್ಡಿಂಗ್ಸ್ ಇವೆ. ನಾವು ನಮ್ಮ ಚುನಾವಣೆಗೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಅಥವಾ ಮೋಟಾರುಕಾರು ಇಡುವುದಕ್ಕೆ ಏನು ಮಾಡಬೇಕೆಂಬುದನ್ನು ಸ್ವಲ್ಪಮಟ್ಟಿಗೆ ಮರೆತು 23 ಲಕ್ಷ ಹೋಲ್ಡಿಂಗ್ಸ್ ಏನಿವೆ ಅವು ಅವನ್ನು ಪಡೆದಿರುವವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಕೆ, ಅವರಿಗಿರುವ ಭೂಮಿ ಅವರು ಸುಖವಾಗಿ ಸಂಸಾರ ಮಾಡುವುದಕ್ಕೆ ಸಾಕೆ, ಸಾಕಷ್ಟು ಆಹಾರ ಬೆಳೆಯುವುದಕ್ಕೆ ಸಾಕೆ ಎಂದು ಯೋಚನೆ ಮಾಡಿದರೆ ಆಗ ಸಮಿತಿಯ ವರದಿ ಪ್ರಗತಿ ಎಷ್ಟುಮಟ್ಟಿಗೆ ಸಾಧಿಸಿದೆ ಅಥವ ಇಲ್ಲ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ಸಂಪೂರ್ಣವಾಗಿ ಈ ವರದಿ ಮುಂದಗಾಮಿ ಎಂದು ಹೇಳುವುದಕ್ಕೆ ನಾನು ಸಿದ್ಧವಾಗಿಲ್ಲ. ವಸ್ತುಸ್ಥಿತಿಯನ್ನರಿತು ಈ ಸುಧಾರಣೆಯನ್ನು ನಮೂದು ಮಾಡಬೇಕಾಗಿದೆ.

ಮತ್ತೊಂದು ಮುಖ್ಯ ವಿಚಾರ ನಮ್ಮ ಪ್ಲಾನಿಂಗ್ ಡೆಮೋಕ್ರ್ಯಾಟಿಕ್ ಪ್ಲಾನಿಂಗ್ ಎಂದು ಹೇಳುತ್ತಾರೆ. ಟೊಟ್ಯಾಲಟೇರಿಯನ್ ಪ್ಲಾನಿಂಗಿಗೂ ಡೆಮೊಕ್ರ್ಯಾಟಿಕ್ ಪ್ಲಾನಿಂಗಿಗೂ ಇರುವ ವ್ಯತ್ಯಾಸ ತಿಳಿದುಕೊಂಡಿದ್ದೀರಿ. ಅದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಕಾಂಗ್ರೆಸ್ ಪಕ್ಷ ಸಮತಾವಾದದ ಗುರಿ ಮುಟ್ಟಬೇಕೆಂದಿರುವಾಗ, ಬಡವರಿಗಾಗಿ ದುಡಿಯಬೇಕೆಂದು ಹೇಳುತ್ತಿರುವಾಗ, ನಮ್ಮಲ್ಲಿ ಇಷ್ಟು ಭಿನ್ನಾಭಿಪ್ರಾಯವಿರುವಾಗ, ಈ ವರದಿ ಪ್ರಕಾರ ಈಗಲೇ ಮಾಡಬೇಕೇ, ಬೇಡವೇ, ಸೀಲಿಂಗ್ ಇಡಬೇಕೇ, ಬೇಡವೇ ಎಂದು ವಾದವಿವಾದವಿರುವಾಗ ಇದಕ್ಕಿಂತ ಪ್ರಗತಿ ಪರವಾದ ಸಂದರ್ಭವಿದ್ದರೂ ವರದಿ ಈಗಲೇ ಬೇಡವೆಂದು ಬಹುಶಃ ಹೇಳುತ್ತಿದ್ದರೋ

(ಶ್ರೀ ಡಿ. ದೇವರಾಜ ಅರಸ್)

ಏನೋ ಒಟ್ಟಿನಲ್ಲಿ ಇದಕ್ಕೆ ಬಹುಮತದ ಬೆಂಬಲ ದೊರೆತರೆ ಅಂಗೀಕಾರವಾಗುತ್ತದೆ, ಇಲ್ಲದಿದ್ದರೆ ಇಲ್ಲ. ಈ ಎಲ್ಲಾ ಕಾರಣಗಳಿರುವುದರಿಂದ ಪ್ರಗತಿಶೀಲವಾದ ವರದಿ ಬರೆದರೂ ಸಹ ಕಾರ್ಯಗತವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇದು ಪ್ರಜಾಪ್ರಭುತ್ವ ಪದ್ಧತಿಯಲ್ಲಿರುವ ಒಂದು ನ್ಯೂನ್ಯತೆಯೆಂದು ಹೇಳಿದರೆ ತಪ್ಪಿಲ್ಲ. ಈ ಕಾರಣದಿಂದ ಇದು ತೀರ ಮಂದಗಾಮಿ ಎಂದು ಹೇಳುವುದಕ್ಕೆ ಸಿದ್ಧವಿಲ್ಲ, ಕೆಲವು ವಿಚಾರಗಳಲ್ಲಿ ಸ್ವಲ್ಪ ಮುಂದುವರೆದು ಹೋಗಬಹುದಾಗಿತ್ತೋ ಏನೋ ಎಂದು ಮನಸ್ಸಿಗೆ ತೋರುವುದನ್ನು ತಮ್ಮ ಮುಂದಿಡುತ್ತೇನೆ.

ಶ್ರೀ ಮುಕ್ಕಣ್ಣಪ್ಪನವರು ಮಾತನಾಡುವಾಗ ಪರ್ಸನಲ್ ಕಲ್ಟಿವೇಷನ್ ವಿಚಾರದಲ್ಲಿ ಟೀಕೆ ಮಾಡಿದರು. ಈ ವರದಿಯಲ್ಲಿ ಪರ್ಸನಲ್ ಕಲ್ಟಿವೇಷನ್ ಯಾವ ರೀತಿ ಇರಬೇಕೆಂಬುದಕ್ಕೆ ಒಂದು ವಿವರಣೆಯಿದೆ. ಅದು ಸರಿಯಲ್ಲ, ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದೆ ಎಂಬ ರೀತಿಯಲ್ಲಿ ಟೀಕೆಮಾಡಿದರು. ಅದರ ಸಾರಾಂಶವೇನೆಂದರೆ ಸ್ವತಃ ವ್ಯವಸಾಯಮಾಡುವುದಕ್ಕೆ ಮಾತ್ರ ಪರ್ಸನಲ್ ಕಲ್ಟಿವೇಷನ್ ಎಂದಿರಬೇಕೇ ಹೊರತು ಬೇರೆಯವರ ಕಡೆಯಿಂದ ಅಂದರೆ ದಿನವಹಿ ಹಣಕೊಟ್ಟು ಕೂಲಿಗಾರರನ್ನಿಟ್ಟುಕೊಂಡು ಅವರಿಂದ ಜೀತಮಾಡಿಸುವುದು ಪರ್ಸನಲ್ ಕಲ್ಟಿವೇಷನ್ ಆಗಬಾರದು, ತಾವೂ, ತಮ್ಮ ಸಂಸಾರದ ಜನರೆಲ್ಲರೂ ಸೇರಿ ಸ್ವತಃ ವ್ಯವಸಾಯ ಮಾಡುವುದು ಮಾತ್ರ ಪರ್ಸನಲ್ ಕಲ್ಟಿವೇಷನ್ ಎಂದು ಶ್ರೀ ಮುಕ್ಕಣ್ಣಪ್ಪನವರಿಗೆ ಅಭಿಪ್ರಾಯವಿದೆಯೆಂದು ಭಾವಿಸುತ್ತೇನೆ. ಇದು ಒಪ್ಪಬೇಕಾದ ಮಾತು. ಆದರೆ ಈ ವರದಿಯಲ್ಲಿ ಹೇಳಿರುವ ಪ್ರಕಾರ ಲೇಬರ್ ಹೈರ್ ಮಾಡುವುದಕ್ಕೆ ಅವಕಾಶವಿದೆ. ಈ ಅವಕಾಶವನ್ನು ತಪ್ಪಿಸಿದರೆ ಬೇರೆ ಯಾವರೀತಿ ಮಾಡುವುದಕ್ಕೆ ಸಾಧ್ಯವಿದೆ ? ಇದರ ಸಾಧ್ಯಾಸಾಧ್ಯತೆಗಳನ್ನು ನಾವು ಯೋಚನೆಮಾಡಬೇಕಾದರೆ ಸೀಲಿಂಗ್ ಲಿಮಿಟ್‌ಗೆ ಬಂದರೆ ಒಂದು ಫ್ಲೋರಿಂಗ್ ಲಿಮಿಟ್ ಎಂದೇನು ಹೇಳುತ್ತೇವೋ ಆ ಆಧಾರದಮೇಲೆ ಯೋಚನೆ ಮಾಡಿದರೆ ಸಾಕು.

ಫ್ಲೋರಿಂಗ್ ಲಿಮಿಟ್ ಎಂದರೆ ವ್ಯವಸಾಯದಲ್ಲಿ ಕೊಡತಕ್ಕ ಎಲ್ಲ ಜನರಿಗೂ, ಅವರು landlord ಆಗಲೀ, ಟೆನೆಂಟ್ ಆಗಲೀ, labourer ಆಗಲೀ, ಪ್ರತಿಯೊಬ್ಬರಿಗೂ ಸಹ ಅವರು ತಮ್ಮ ಸಂಸಾರವನ್ನು ಕಾಪಾಡುವುದಕ್ಕೆ ಕನಿಷ್ಠವಾಗಿ ಎಷ್ಟು ಜಮೀನು ಇರಬೇಕೆಂಬುದನ್ನು ನಾವು ಯೋಚನೆಮಾಡಬೇಕಾಗಿ ಬರುತ್ತದೆ. ಸೀಲಿಂಗ್ ಲಿಮಿಟ್‌ನಲ್ಲಿ ಒಂದು ಸಂಸಾರಕ್ಕೆ 5,400 ರೂಪಾಯಿಗಳ ಉತ್ಪತ್ತಿ ಬರಬೇಕು ಎಂದರೆ ಫ್ಲೋರಿಂಗ್ ಲಿಮಿಟ್‌ನಲ್ಲಿ ಅಷ್ಟು ಬರುವುದಿಲ್ಲ. ನಮ್ಮ ದೇಶದಲ್ಲಿ ಎಷ್ಟು ಭೂಮಿ ಇದೆ, ಆ ಭೂಮಿಯಲ್ಲಿ ವ್ಯವಸಾಯಮಾಡತಕ್ಕ ಜನರ ಸಂಖ್ಯೆ, ವ್ಯವಸಾಯದ ಕೂಲಿಯವರನ್ನೂ ಸೇರಿಸಿಕೊಂಡು ಎಷ್ಟಿದೆ, ಆ ಭೂಮಿಯನ್ನು ಹಂಚಿದರೆ ಪ್ರತಿಯೊಬ್ಬರಿಗೂ ಎಷ್ಟೆಷ್ಟು ಬರುತ್ತದೆಯೋ ಅದು ಫ್ಲೋರಿಂಗ್‌ಲಿಮಿಟ್. ಈ ವರದಿಯಲ್ಲಿ ನಮೂದುಮಾಡಿರುವ ಪ್ರಕಾರ ಒಂದು ತಲೆಗೆ 2·47 ಎಕರೆಯಂತೆ ಸಾಗುವಳಿಗೆ ಯೋಗ್ಯವಾದ ಜಮೀನು ಬರುತ್ತದೆ. ಇಷ್ಟು ಜಮೀನನ್ನು ಪ್ರತಿಯೊಬ್ಬ ಮನುಷ್ಯನಿಗೆ ಕೊಟ್ಟರೆ ನಮ್ಮಲ್ಲಿರುವ ವ್ಯವಸಾಯಗಾರರೆಲ್ಲರಿಗೂ ಸಹ ಅದನ್ನು ಹಂಚುವುದಕ್ಕೆ ಸಾಧ್ಯ. ಈ ರೀತಿ ಜಮೀನನ್ನು ಹಂಚುವುದಾದರೆ, ಬಹುಶಃ ಈ ವರದಿಯಲ್ಲಿ ನಮೂದಿಸಿರುವ ಸೀಲಿಂಗ್ ಲಿಮಿಟ್‌ಗಿಂತ ಕೆಳಕ್ಕೆ ಬರುತ್ತದೆ. ಐದು ಜನರಿರತಕ್ಕ ಒಂದು ಸಂಸಾರಕ್ಕೆ ಹತ್ತು ಎಕರೆ ಜಮೀನು ಸಿಕ್ಕುತ್ತದೆ. ಇದು ಒಂದು ಫ್ಲೋರಿಂಗ್ ಲಿಮಿಟ್ ಆಗುತ್ತದೆ. ಫ್ಲೋರಿಂಗ್ ಲಿಮಿಟ್ ಮತ್ತು ಸೀಲಿಂಗ್ ಲಿಮಿಟ್ ಬಗ್ಗೆ ವಾದವಿವಾದಮಾಡುವುದಕ್ಕೆ ಹೊರಟರೆ ಸಭೆಯಕಾಲ ವ್ಯಯವಾಗುತ್ತದೆ. ಸೀಲಿಂಗ್‌ಲಿಮಿಟ್ ಬಗ್ಗೆ ವಾದವಿವಾದಗಳು ಈ ಸಭೆಯಲ್ಲಿಯೂ ಮತ್ತು ದೇಶದಲ್ಲಿಯೂ ನಡೆದಿವೆ. ಇದರ ಬಗ್ಗೆ ಮಾಡಿರುವ ಟೀಕೆಗಳನ್ನೆಲ್ಲ ನೋಡಿದರೆ, ವರದಿಯಲ್ಲಿರತಕ್ಕ ಮೂಲ ವಿಚಾರ ಸೀಲಿಂಗ್‌ಲಿಮಿಟ್. ಇದನ್ನು (ವ್ಯವಸಾಯ ಕ್ಷೇತ್ರದಲ್ಲಿ) Agricultural Sector ನಲ್ಲಿ ಮಾತ್ರ ಏಕೆ ತರಬೇಕು, ಬೇರೆ ಕ್ಷೇತ್ರಗಳಲ್ಲಿ, Industrial Sector ನಲ್ಲಿ, other spheres of economic activitiesನಲ್ಲಿ ಏಕೆ ತರಬಾರದು! ಇತರ ಕ್ಷೇತ್ರಗಳಲ್ಲಿ ಸೀಲಿಂಗ್ ತಂದಾಗ ಇಲ್ಲಿಯೂ ತನ್ನಿ ಎಂಬ ತಕ್ಕ ವಾದವನ್ನು ಹೇಳುತ್ತಿದ್ದಾರೆ. ನಾವು ಇದನ್ನು ಎರಡು ಮುಖವಾಗಿ ನೋಡಬೇಕು. ಈಗಿನ ಪರಿಸ್ಥಿತಿಯಲ್ಲಿ ಪರಮಾವಧಿ ಮಿತಿಯನ್ನು ಎಲ್ಲ ಕಡೆಯೂ ಒಂದೇಸಲ ಜಾರಿಗೆ ತರುವುದಕ್ಕೆ ಸಾಧ್ಯವೇ ಅಥವ ಹಂತಹಂತವಾಗಿ ತರಬೇಕೇ ಎನ್ನುವುದು ಒಂದು ವಿಚಾರ. ಹಂತ ಹಂತವಾಗಿ ಜಾರಿಗೆ ತರಬೇಕೆಂದು ತಜ್ಞರು ಒಪ್ಪಿಗೆಗೆ ಬಂದಿದ್ದಾರೆ. ಹೊರಗಡೆ ಮಾಡತಕ್ಕ ಟೀಕೆಗಳಲ್ಲಿ ಬೇರೆ ಕಡೆ ಜಾರಿಗೆ ತಂದರೆ ನಾವು ಇದನ್ನು ಒಪ್ಪುತ್ತೇವೆ ಎಂದು ಹೇಳುತ್ತಾರೆ. ವ್ಯವಸಾಯಗಾರರು ಯಾರೂ ಇದರ ವಿಚಾರವಾಗಿ ಹೆಚ್ಚಿಗೆ ಟೀಕೆಮಾಡುವುದಕ್ಕೆ ಹೋಗುತ್ತಿಲ್ಲ. ಮಾನ್ಯ ಮಿತ್ರರಾದ ಬೋರಣ್ಣ ಗೌಡರು ಮಾತನಾಡುವಾಗ ಇದರ ವಿಚಾರ ಹೇಳಿದರು. ಸೀಲಿಂಗ್ ಲಿಮಿಟ್ ಹಾಕಿರುವುದರಿಂದ ಬಹುಜನರಿಗೆ ತೊಂದರೆಯಾಗುವುದಿಲ್ಲ. ನಮ್ಮಲ್ಲಿ ಶೇಕಡ 71 ಜನರು ವ್ಯವಸಾಯವನ್ನು ಮಾಡಿಕೊಂಡಿದ್ದಾರೆ. ಸೀಲಿಂಗ್ ಲಿಮಿಟ್ ಹಾಕುವುದರಿಂದ ಅವರ ಪೈಕಿ ಕೇವಲ 40-45 ಸಾವಿರ ಸಂಸಾರಗಳಿಗೆ affect ಆಗಬಹುದು ಎಂದು roughಆಗಿ ಲೆಕ್ಕ ಹಾಕಿದ್ದೇನೆ.

ಒಬ್ಬ ಸದಸ್ಯರು.—ಅಷ್ಟೂ ಆಗಲಾರದು.

ಶ್ರೀ ಡಿ. ದೇವರಾಜ ಅರಸ್.—ಅಷ್ಟೂ ಆಗಲಾರದು. ಎಂದು ನಾನೂ ಒಪ್ಪುತ್ತೇನೆ. ಲಕ್ಷಾಂತರ ಜನಗಳಿಗೆ ಇದರಿಂದ ತೊಂದರೆಯಾಗುವುದಿಲ್ಲ. ಅನೇಕ ವಿಧದಲ್ಲಿ ಅನುಕೂಲತೆಗಳು ಕಾಣುತ್ತವೆ. ಸೀಲಿಂಗ್ ಲಿಮಿಟ್‌ನಿಂದ ತೊಂದರೆ ಇದೆ ಎಂಬ ವಾದದಲ್ಲಿ ಎಲ್ಲರೂ ಸೇರಿದ್ದಾರೆ. ಭೂಮಾಲೀಕರು ಸೇರಿದ್ದಾರೆ, ಭೂಮಾಲೀಕರಲ್ಲದವರು ಸೇರಿದ್ದಾರೆ, industrialists ಸೇರಿದ್ದಾರೆ, lawyers ಸೇರಿದ್ದಾರೆ. ಎಲ್ಲತರಹ ಜನರೂ ಸೇರಿದ್ದಾರೆ. ಇದರಲ್ಲಿ ನನಗೆ ಒಂದು ವಿಷಯ ಅರ್ಥವಾಗುತ್ತದೆ. ಈ ಜನರಿಗೆಲ್ಲ ಒಂದು ವಿಧವಾದ ಭೀತಿಬಂದಿದೆ. ಇವೊತ್ತು ವ್ಯವಸಾಯ ಕ್ಷೇತ್ರದಲ್ಲಿ ಸೀಲಿಂಗ್ ಹಾಕುವುದನ್ನು ಒಪ್ಪಿಕೊಂಡಿದ್ದೇ ಆದರೆ, ಮುಂದೆ ಅದೇರೀತಿ ನಮಗೂ ಬಂದುಬಿಡುತ್ತದೆಯೋ ಏನೋ ಎನ್ನುವ ಒಂದು ಬುದ್ಧಿವಂತಿಕೆಯ ಆಲೋಚನೆಯಿಂದ ಕೂಡಿ ಈ ವಿಚಾರವಾಗಿ ಧಾಳಿ ಎಬ್ಬಿಸಿಬಿಡೋಣ ಎನ್ನುವ ಮನೋಭಾವದಿಂದ ಇಷ್ಟೊಂದು ದೊಡ್ಡದಾಗಿ ವಿರೋಧವನ್ನು ಮಾಡುತ್ತಿದ್ದಾರೆ. ನನಗೆ ಒಂದು ಸಣ್ಣ ಗಾದೆ ಜ್ಞಾಪಕಕ್ಕೆ ಬರುತ್ತದೆ. ಮಳೆಬಿದ್ದು ಪ್ರವಾಹದಲ್ಲಿ ಒಂದು ನರಿ ಕೊಚ್ಚಿಕೊಂಡು ಹೋಗುತ್ತಿತ್ತು. ಆಗ ನರಿಯು ಪ್ರಳಯ ಬಂತು ಎಂದು ತಿಳಿದುಕೊಂಡು, ಪ್ರಳಯ ಬಂತು, ಪ್ರಪಂಚವೇ ಮುಳುಗಿಹೋಗುತ್ತಿದೆ ಎಂದು ಕೂಗಿಕೊಂಡಿತಂತೆ.

ಅದೇ ರೀತಿಯಲ್ಲಿ, ಸೀಲಿಂಗ್ ತರುತ್ತೇವೆಂದರೆ, ಪ್ರಪಂಚವೇ ಕೆಳಗೆ ಬಿದ್ದು ಹೋಗುತ್ತದೆ, ದೇಶ ಅಲ್ಲೋಲಕಲ್ಲೋಲವಾಗುತ್ತದೆ, ನಮ್ಮ ಆಹಾರೋತ್ಪತ್ತಿ ಬಹಳ ಕಡಮೆಯಾಗುತ್ತದೆ ಎಂದು ಇಲ್ಲದಸಲ್ಲದ ಟೀಕೆಯನ್ನು ಮಾಡುತ್ತಿದ್ದಾರೆ. ಇದಕ್ಕೆ ಖಂಡಿತ ಅವಕಾಶಕೊಡಬಾರದು.

ಈ ವರದಿಯು ಯಾವ ರೀತಿಯಲ್ಲಿ ಮಂದಗಾಮಿ ಎಂದು ಕೆಲವು ಮಿತ್ರರು ಕೇಳಿದರು. ಸೀಲಿಂಗನ್ನು ಇಷ್ಟು ಪ್ರಮಾಣದಲ್ಲಿ ಇಟ್ಟಿರತಕ್ಕ ವಿಷಯದಲ್ಲಿ ಇದು ಮಂದಗಾಮಿಯಾಗಿದೆ. ಇನ್ನೂ ಕಡಮೆ ಇರಬಹುದಾಗಿತ್ತು. ಶ್ರೀಮಾನ್ ಲಿಂಗಾರೆಡ್ಡಿಯವರು ಈ ವಿಚಾರದಲ್ಲಿ ಬಹಳ ಪ್ರಗತಿದಾಯಕವಾದ ಅಭಿಪ್ರಾಯವುಳ್ಳವರು. ಅವರೂ ಸಹ ಈಗ ಇಟ್ಟಿರುವ family holding limit ಇನ್ನೂ ಸ್ವಲ್ಪ ಜಾಸ್ತಿಮಾಡಬೇಕು. 1,200 ರೂಪಾಯಿಗಳಿಗಿಂತ ಇನ್ನೂ ಜಾಸ್ತಿ ಮಾಡಬೇಕಾಗಿತ್ತು ಮತ್ತು ಬೇಸಿಕ್ ಹೋಲ್ಡಿಂಗ್ 400 ರೂಪಾಯಿಗಳಿಗಿಂತ ಹೆಚ್ಚಾಗಿರಬೇಕಾಗಿತ್ತು ಎಂದು ಹೇಳಿದರು. ಫ್ಲೋರಿಂಗ್ ಲಿಮಿಟ್ ವಿಚಾರವನ್ನು ಬಹುಶಃ ಅವರು ಹೀಗೆ ಹೇಳುತ್ತಿರಲಿಲ್ಲ. ಈಗ ಸೂಚಿಸಿರುವುದೂ ಸಹ ಜಾಸ್ತಿ ಎಂದೂ ನನ್ನ ಭಾವನೆ. ಏಕೆಂದರೆ ಕೆಲವು ಸ್ನೇಹಿತರ ಶಂಕೆ ಏನಿದೆ, 400 ರೂಪಾಯಿ ಮೂಲ ಹಿಡುವಳಿಯಾಗಲೀ, 1,200 ರೂಪಾಯಿ ಕುಟುಂಬ ಹಿಡುವಳಿಯಾಗಲೀ, 5,400 ರೂಪಾಯಿಗಳ ಪರಮಾವಧಿ ಮಿತಿಯಾಗಲೀ...

(*Interruptions*)

ನಾನು ಮೊದಲೇ ಹೇಳಿದಹಾಗೆ ಅದನ್ನು ಯಾವ ದೃಷ್ಟಿಕೋಣದಿಂದ ನೋಡುತ್ತೇವೆನ್ನುವುದು ಬಹಳ ಮುಖ್ಯವಾದುದು. ಇನ್ನು ಕೆಲವರು, 400 ರೂಪಾಯಿ ವರಮಾನ ಬರುವ ಜಮೀನು ಎಷ್ಟು ಎಂದು ಗೊತ್ತುಮಾಡಿದರೆ, ಎಷ್ಟು ಕಾಲದವರೆಗೂ 400 ರೂಪಾಯಿ ವರಮಾನ ಬರಬೇಕು ಎನ್ನುವ ಶಂಕೆಯನ್ನು ವ್ಯಕ್ತಪಡಿಸಿದರು. ತಾತ್ಕಾಲಿಕವಾಗಿ ಇವೊತ್ತಿನ ದಿವಸ ಯಾರುಯಾರಿಗೆ ಎಷ್ಟೆಷ್ಟು ಭೂಮಿಯನ್ನು ಕೊಡಬೇಕು ಎಂದು ಲೆಕ್ಕಾಚಾರಮಾಡುವಾಗ ಈ ಒಂದು ಮಿತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಮಾನ್ಯ ಶ್ರೀ ಮಲ್ಲಾರಾಧ್ಯರು 400 ರೂಪಾಯಿ, 1,200 ರೂಪಾಯಿ ಮತ್ತು 5,400 ರೂಪಾಯಿಗಳಿಗೆ ಬದಲು ಅವರ ಲೆಕ್ಕದ ಪ್ರಕಾರ ಬೇರೆ ಮಿತಿಯಿರಬೇಕೆಂದು ಸೂಚಿಸಿದರು. ತಮ್ಮ ಪಕ್ಷದವರೆಲ್ಲ ಸೇರಿ ಲೆಕ್ಕಹಾಕಿರುವುದಾಗಿ ಹೇಳಿದರು. ನಿಮ್ಮ ಲೆಕ್ಕಾಚಾರವೇನೆಂದು ಹೇಳುತ್ತೀರಾ ಎಂದು ಕೇಳಿದ್ದಕ್ಕೆ ಬೇರೆ ವೇಳೆಯಲ್ಲಿ ತಿಳಿಸುತ್ತೇನೆಂದರು. ನಾನು ಅವರಿಗೆ ನನ್ನ ಲೆಕ್ಕಾಚಾರ ಹೇಳುತ್ತೇನೆ. 400 ರೂಪಾಯಿಗಳ ಮೂಲ ಹಿಡುವಳಿಯನ್ನು ತೆಗೆದುಕೊಂಡು ಅದರಪ್ರಕಾರ ಸೀಲಿಂಗ್ ಲಿಮಿಟ್ ಎಂದು ಗೊತ್ತುಮಾಡಿರುವ 5,400ರೂಪಾಯಿಗಳ ವರಮಾನಬರಬೇಕಾದರೆ ಎಷ್ಟು ಜಮೀನು ಇರಬೇಕು ಎಂದು ನೋಡೋಣ. ನನ್ನ ಲೆಕ್ಕದ ಪ್ರಕಾರ ನೀರಾವರಿ ಜಮೀನಾದರೆ ಬಹುಶಃ 40-50 ಎಕರೆಗೆ ಒಳಪಟ್ಟು ಬರುತ್ತದೆ. ಇದು ಆಯಾಯ ಭೂಮಿಯ ಉತ್ಪತ್ತಿಯಮೇಲೆ ಹೋಗುತ್ತದೆ. ನಮ್ಮ ದೇಶದ ಸರಾಸರಿ ಉತ್ಪತ್ತಿ (average yield) ಯನ್ನೂ ಆಧಾರವಾಗಿ ತೆಗೆದುಕೊಂಡು ನಾನು ಹೇಳುತ್ತಿದ್ದೇನೆ. ಮೈಸೂರು ದೇಶದ ನೀರಾವರಿ ಪ್ರದೇಶದಲ್ಲಿ ಬರುವ ಭೂಮಿಯಲ್ಲಿ ಸರಾಸರಿ 8-10 ಪಲ್ಲ ಭತ್ತ ಆಗುತ್ತದೆ. ಮಾನ್ಯ ಮಿತ್ರರಾದ ಶ್ರೀ ಮಲ್ಲಾರಾಧ್ಯರು ಅದನ್ನು ಒಪ್ಪುತ್ತಾರೆಂದು ಕಾಣುತ್ತದೆ. ಒಂದು ಪಲ್ಲಕ್ಕೆ 25 ರೂಪಾಯಿ ಧಾರಣೆ ಇಟ್ಟುಕೊಂಡು ಆ ಪ್ರಕಾರವಾಗಿ ಲೆಕ್ಕ ಹಾಕಿದ್ದೇ ಆದರೆ ಈ ಸೀಲಿಂಗ್ ಲಿಮಿಟ್ ಬರುತ್ತದೆ. ಖುಷ್ಕಿ ಜಮೀನು ಆದರೆ ಶೇಕಡ 33⅓ ರಷ್ಟೆಂದು ಹೇಳಿದ್ದಾರೆ. ಇದರಂತೆ ಬೇಸಿಕ್ ಹೋಲ್ಡಿಂಗ್ ಸುಮಾರು 16 ಎಕರೆ ಆಗುತ್ತದೆ. ಎಕರೆಗೆ ಆವರೇಜ್ ತೆಗೆದುಕೊಂಡಿರು, ವುದು ಮೂರು ಪಲ್ಲ. ಬಹುಶ ಇನ್ನೂ ಕಡಿಮೆಯಾಗ ಬಹುದು. ಸೀಲಿಂಗ್ ಲಿಮಿಟ್ ಪ್ರಕಾರ 200 ಎಕರೆ ಖುಷ್ಕಿ ಜಮೀನು ಒಬ್ಬನಿಗೆ ಉಳಿಯುತ್ತದೆ. ಒಂದು ಜಾಯಿಂಟ್ ಫ್ಯಾಮಿಲಿಗೆ—5 ಜನರಿಗೆ ಹೆಚ್ಚಾಗಿರುವ ಸಂಸಾರಕ್ಕೆ ಆದರೆ, ಅದರ ಎರಡರಷ್ಟು ಅಂದರೆ 400 ಎಕರೆ ಆಯಿತು. ಈ ಸಲಹೆಯಿಂದ 40 ಸಾವಿರ ಸಂಸಾರಗಳಿಗೆ affect ಆಗುತ್ತದೆ ಎಂದು ಒಬ್ಬರು ಹೇಳಿದರು. ಬಹುಶಃ ಹತ್ತು ಸಾವಿರ ಸಂಸಾರಗಳಿಗೆ ಅಫೆಕ್ಟ್ ಆಗಬಹುದು. ಇದಕ್ಕೋಸ್ಕರ ಎದ್ದು ಕುಣಿಯುತ್ತಿರುವ ಹಾಗೆ ಕಾಣುತ್ತಿದೆ. ಮುಂದೆ ಬರುವ ಭೀತಿಯನ್ನು ಈಗಲೇ ಕಂಡು ಕೂಗಾಡಿ, ಈ ಸುಧಾರಣೆಯನ್ನೇ ತಪ್ಪಿಸಿಬಿಡೋಣ ಎನ್ನುವ ಟೀಕೆಗಳು ಬರುತ್ತಿವೆ. ಇದಕ್ಕೆ ಹೆಚ್ಚಿಗೆ ಗಮನಕೊಡಬೇಕಾಗಿಲ್ಲ.

ಇನ್ನೊಂದು ವ್ಯಸನಕರವಾದ ಸಂಗತಿ. ಯಾರು ಬಡವರಿಗಾಗಿ ದುಡಿಯುತ್ತಾ ಇದ್ದೇವೆ, ಜನರಿಗಾಗಿ ದುಡಿಯುತ್ತಾ ಇದ್ದೇವೆ, ಮಹಾತ್ಮ ಗಾಂಧಿಯವರ ಅನುಯಾಯಿಗಳು ಎಂದು ಹೇಳುತ್ತಿದ್ದೇವೆಯೋ ಅಂಥವರೇ ಇವತ್ತು ಈ ಸುಧಾರಣೆಯಿಂದ ದೇಶದಲ್ಲಿ ಅನರ್ಥವಾಗುತ್ತದೆ, ಅಲ್ಲೋಲಕಲ್ಲೋಲವಾಗುತ್ತದೆ, ಆಹಾರ ಬೆಳೆ ಕಡಮೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ಈ ರೀತಿಯಾದ ನೆಪಗಳನ್ನು ಹೇಳಿ, ಬೇಡ ಎಂದು ಹೇಳಬೇಕಾದರೆ, ಇದರಲ್ಲಿ ಯಾವ ಸೋಷಿಯಲಿಸಮ್ ಇದೆ? ಇದರಲ್ಲಿ ನೆಹರೂ ಸೋಷಿಯಲಿಸಮ್ ಎಂದು ಬೇರೆ ಇಲ್ಲ. ಸೋಷಿಯಲಿಸಮ್ ಅನ್ನುವುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಪಿ.ಎಸ್.ಪಿ. ಯವರು ಒಪ್ಪಿಕೊಂಡಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು). – ಮೈಸೂರು ಕಾಂಗ್ರೆಸ್ ಸೋಷಿಯಲಿಸಮ್ ಎಂದು ಬೇರೆ ಇದೆಯೇ?

ಶ್ರೀ ಡಿ. ದೇವರಾಜ ಅರಸ್.—ಇಲ್ಲ. ಸೋಷಿಯಲಿಸಮ್, ಎಂದರೆ ಸೋಷಿಯಲಿಸಮ್ಮೇ. ಸೋಷಿಯಲಿಸಮ್ ನೆಹರು ಸೋಷಿಯಲಿಸಮ್ ಎಂದು ನಮ್ಮಲ್ಲಿ ಹೀಗೆ ವಾದವಿವಾದಗಳು ಎದ್ದಿರುವುದು ಬಹಳ ವ್ಯಸನಕರವಾದ ಸಂಗತಿ.

ಈಗಲಾದರೂ ನಮ್ಮನ್ನು ವಿರೋಧಮಾಡತಕ್ಕಂಥ ಸ್ನೇಹಿತರು, ನಮ್ಮ ಧ್ಯೇಯವೇನಿದೆ ನಮ್ಮ ಗುರಿಯನ್ನು ಹೇಗೆ ಮುಟ್ಟಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕು. ಎರಡನೇ ಪಂಚವಾರ್ಷಿಕ ಯೋಜನೆಗೂ ಸಹ ಅನುಮತಿ ಇದೆ. ಇಡೀ ದೇಶ ಒಪ್ಪಿಕೊಂಡಿರತಕ್ಕಂಥ ಗುರಿಯನ್ನು ಮುಟ್ಟಬೇಕಾದರೆ ಯಾವ ಪಥದಲ್ಲಿ ಹೋಗಬೇಕು ಎನ್ನುವ ವಿಚಾರವನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳುವುದನ್ನು ಮರೆತು ಬಿಟ್ಟಿದ್ದಾರೆ. ಅಂಥಹ ಸ್ನೇಹಿತರಿಗೆ ಗುರಿಯ ವಿಚಾರವನ್ನು ಜ್ಞಾಪಕಕ್ಕೆ ತರಲು ಬಯಸುತ್ತೇನೆ.

ಶ್ರೀಮಾನ್ ಮಲ್ಲಾರಾಧ್ಯರು ಈ ವರದಿಯನ್ನು ಬಹಳವಾಗಿ ಮೆಚ್ಚಿ ಒಪ್ಪಿದ್ದಾರೆ ಕೆಲವು ವಿಷಯಗಳಲ್ಲಿ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಬಹುತೇಕ ಈ ವರದಿಯನ್ನು ಒಪ್ಪಿದ್ದಾರೆ. ಅವರು ಮಾತನಾಡುವಾಗ ಪಕ್ಷದ ಪರವಾಗಿ ಒಪ್ಪಿದ್ದಾರೆ ಎಂದು ಹೇಳಿದರು. ಫ್ಯಾಮಿಲಿ ಲಿಮಿಟ್ ವಿಚಾರವಾಗಿ ಮಾತನಾಡ

(ಶ್ರೀ ಡಿ. ದೇವರಾಜ ಅರಸ್)

ಬೇಕಾದ ಅವಶ್ಯಕತೆ ಇಲ್ಲ. ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರವಾಗಿ ಅವರು ಒಂದು ಮಾತನಾಡಿದರು. ಸೀಲಿಂಗ್ ಲಿಮಿಟ್ಟನ್ನು ವರದಿಯಲ್ಲಿ ನಮೂದು ಮಾಡಿದ್ದಾರೆ. Future acquisition ವಿಚಾರವಾಗಿ ಟೀಕೆ ಮಾಡಿದರು. ನನಗೆ ಹೀಗೆ ಅನ್ನಿಸುತ್ತದೆ. ಮೊದಲಿನಿಂದಲೂ ಈ ವರದಿಯನ್ನು ಒಪ್ಪಿಕೊಂಡು ಇದರಲ್ಲಿರತಕ್ಕಂಥ ಸಲಹೆಗಳನ್ನು ಒಪ್ಪಿಕೊಂಡು, ಕಾಫಿ ತೋಟಗಳ ವಿಚಾರ ಬಂದಾಗ ಅವರ ವಾದವನ್ನೆಲ್ಲಾ ಹಿಂದಕ್ಕೆ ಬಿಟ್ಟರು. ಏಕೆ ಹಾಗೆ ಮಾಡಿದರೋ ನನಗೆ ಗೊತ್ತಿಲ್ಲ. ಸುತ್ತಿಕೊಂಡು, ಸುತ್ತಿಕೊಂಡು ಬಂದು, ಸಡಿಲವಾಗಿ ವಾದ ಮಾಡಿದ್ದನ್ನು ಹಿಂದಕ್ಕೆ ಬಿಟ್ಟರು. ಅಲ್ಲಿ ಸೀಲಿಂಗ್ ಬೇಡ ಅಂದರು. ಕಾಫಿ ತೋಟವನ್ನು ಬೆಳೆಯ ಬೇಕಾದರೆ ಕಷ್ಟ ಹೆಚ್ಚಾಗಿರುತ್ತದೆ ಎಂದು ಹೇಳಿದರು. ಈ ಕಷ್ಟವೆಲ್ಲಾ ಗೊತ್ತಿದೆ. ಸಮಿತಿಯವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅಂಕಿಅಂಶಗಳ ಗಮನವನ್ನು ತಿಳಿದುಕೊಂಡಿದ್ದಾರೆ. ಶ್ರೀ ಮಲ್ಲಾರಾಧ್ಯರು ಹೇಳಿದರು. Bigger the estate, greater is the production ಎಂದರೆ, ಜಮೀನಿನ ವಿಸ್ತೀರ್ಣ ಹೆಚ್ಚಾಗಿದ್ದರೆ ಹೆಚ್ಚಾಗಿ ಬೆಳೆಯುತ್ತಾರೆ, ವಿಚಾರ ಮಾಡಿ ಸೀಲಿಂಗ್ ಹಾಕಬೇಕು ಎಂದು ಹೇಳಿದರು. ಒಂದುವೇಳೆ ಒಂದು ಸಂಸಾರ 50-100 ಎಕರೆ ವ್ಯವಸಾಯ ಮಾಡತಕ್ಕ ಸಾಧ್ಯತೆ ಇಲ್ಲವೆಂದರೆ ಅದಕ್ಕೆ ಪರಿಹಾರ ಏನು ? ಎಷ್ಟು ಸಾವಿರ ಎಕರೆ ಬೇಕಾದರೂ ಸಾಗುವಳಿಗೆ ತೆಗೆದುಕೊಳ್ಳುವುದಕ್ಕೆ ಬೇರೆ ವಿಧಾನವಿದೆ. ಸಹಕಾರ ವ್ಯವಸಾಯ ಪದ್ಧತಿ ಮೇಲೆ ಮಾಡಲಿ. ಇನ್ನೊಂದು ವಿಚಾರ ಇದೆ. ವರದಿಯಲ್ಲಿ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ ವಿಚಾರವನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಂಡಿಲ್ಲ. ನಾನು ಈ ವಿಷಯದಲ್ಲಿ ಒಂದು ಟೀಕೆ ಮಾಡಬೇಕಾಗಿದೆ. ಹಿಂದೆ ನಮ್ಮ ಸರ್ಕಾರದವರು ಆರ್ಡರ್ಸ್ ಹೊರಡಿಸುವ ಕಾಲದಲ್ಲಿ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ಬಗ್ಗೆ ಒಂದು ಆರೋಟ್ಯಾಂಶವನ್ನು ಸೇರಿಸಬೇಕು ಎಂದು ಸರ್ಕಾರಕ್ಕೆ ಸೂಚನೆ ಮಾಡಿದ್ದೆ. ಆಗ ಮಾನ್ಯ ಸಚಿವರು ಸೇರಿಸುತ್ತೇನೆ ಎಂದು ಉತ್ತರ ಕೊಟ್ಟರು. ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ ಬಗ್ಗೆ ನ್ಯಾಷನಲ್ ಪ್ಲಾನಿಂಗ್ ಕಮಿಟಿಯವರು ಒಂದು ಮಾತು ಹೇಳಿದ್ದಾರೆ.

> From encouraging and promoting voluntary consolidation in the same village, to the compulsory legislation by authority, there are a variety of schemes which however all flounder ultimately on the rock of national economy.

ಇವರೂ ಸಹ ಜಮೀನನ್ನು ಛಿದ್ರ ಛಿದ್ರವಾಗಿ ಭಿನ್ನ ಭಿನ್ನವಾಗಿ ಮಾಡಿ ಮಕ್ಕಳಿಂದ ಮಕ್ಕಳಿಗೆ, ವಂಶ ಪಾರಂಪರ್ಯವಾಗಿ ಹಂಚಿ ಹಾಕಿದರೆ ಎಲ್ಲಾ ತರಹದ ಸುಧಾರಣೆಗಳೂ ಕೆಡುವುದಕ್ಕೆ ದಾರಿ; ಸೀಲಿಂಗ್ ಲಿಮಿಟ್ ಹಾಕುವುದರಿಂದ ಗೇಣಿದಾರನಿಗೆ ಜಮೀನನ್ನು ಖಾಯಂ ಆಗಿ ಕೊಡುವುದರಿಂದ ಆಹಾರದ ಬೆಳೆ ಕಡಿಮೆ ಆಗುವುದಿಲ್ಲ. ವ್ಯವಸಾಯದ ಪ್ರಗತಿಯನ್ನು ಸಾಧನೆ ಮಾಡಬೇಕೆಂದರೆ ಈ ಜಮೀನನ್ನು ವಂಶಪಾರಂಪರ್ಯವಾಗಿ ಹಂಚಿಕೆ ಮಾಡತಕ್ಕದ್ದು ಸರಿಯಲ್ಲ. ಇಂಡಿಯಾದಲ್ಲಿ ಸುಧಾರಣೆ ತರುವುದಕ್ಕೆ ಇದೊಂದು ಅನರ್ಥ. ಇದನ್ನು ಕಂಡು ಬೊಂಬಾಯಿ ಸರ್ಕಾರದವರು, ಉತ್ತರ ಪ್ರದೇಶ ಸರ್ಕಾರದವರು, ಮತ್ತು ಇನ್ನೂ ಕೆಲವು ಸರ್ಕಾರಗಳವರು ಇದನ್ನು ಕಡೆಗಟ್ಟುವುದಕ್ಕೋಸ್ಕರ Consolidation of Holdings ಎಂಬ ಒಂದು ಆಕ್ಟನ್ನು ಸಹ ಮಾಡಿ ಅದರ ಬಗ್ಗೆ ಕೆಲಸ ಕಾರ್ಯಗಳು ನಡೆಯುತ್ತಾ ಇವೆ. ಆ ಕಾನೂನುಗಳು ಏನು ಎನ್ನುವುದನ್ನು ನಾನು ಓದಿಲ್ಲ. ಒಂದು ಕಡೆ Hindu Law of Inheritance ಎಂದು ಇದೆ. ಅದರ ಪ್ರಕಾರ ಜಮೀನನ್ನು ಒಡೆದು ಒಡೆದು ವಂಶ ಪಾರಂಪರ್ಯವಾಗಿ ಹಂಚಿಕೊಳ್ಳುವ ಪಕ್ಷದಲ್ಲಿ, ಅನುವಂಶೀಕವಾಗಿ ನೂರು ಎಕರೆಯಿಂದ 1, $\frac{3}{4}$, $\frac{1}{2}$ ಎಕರೆಗೆ ಭಿನ್ನ ಭಿನ್ನ ಮಾಡತಕ್ಕಂಥ ಪ್ರಸಂಗ ಬರುತ್ತಾ ಇದೆ. ಇನ್ನೊಂದು ಕಡೆ Consolidation of Holding ಮಾಡಿಕೊಂಡು ಹೋಗುತ್ತಾ ಇದ್ದೇವೆ.

12 NOON.

ಹಾಗಿದ್ದರೆ ಅದನ್ನು ನಾವು ಈ ಸಂದರ್ಭದಲ್ಲಿ ಈ ವರದಿಯಲ್ಲಿ ನಮೂದು ಮಾಡಬೇಕಾದ್ದು ಅಗತ್ಯವಾಗಿತ್ತು. ಅದಕ್ಕೆ ಬದಲಾಗಿ ಇನ್ನೊಂದು ರೆಮಿಡಿ ನಾವೂ ಯೋಚನೆ ಮಾಡುವುದು ಇದೆ. ಫ್ರಾಗ್‌ಮೆಂಟೇಷನ್ ತಪ್ಪಿಸಬೇಕಾದರೆ ಅಥವಾ ಈಗಿರತಕ್ಕ ಸಣ್ಣಪುಟ್ಟ ಹಿಡುವಳಿದಾರರು ಯಾರು ಇದ್ದಾರೋ ಅವರೆಲ್ಲರೂ ಒಂದು ಲಾಭದಾಯಕ ರೀತಿಯಲ್ಲಿ ವ್ಯವಸಾಯ ಮಾಡಬೇಕಾದರೆ ಜಮೀನನ್ನು ಹೆಚ್ಚಾಗಿ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತೊಂದು ಏನೆಂದರೆ ನಾವು ಎರಡನೆ ಪಾಂಚವಾರ್ಷಿಕ ಯೋಜನೆಯನ್ನು ಮಾಡುತ್ತಾ ಇದ್ದೇವೆ. ಮೂರನೆ ಪಂಚವಾರ್ಷಿಕ ಯೋಜನೆಯನ್ನು ಮಾಡಿದರೂ ಸಹ ಶ್ರೀಮಾರ್ಕಚನ್ನಬಸಪ್ಪನವರು ಒಂದು ವಾದವನ್ನು ಹೇಳಿದರು— ಅಗ್ರಿಕಲ್ಚರಲ್ ಸೆಕ್ಟರ್‌ನಲ್ಲಿರತಕ್ಕ ಜನರ ಸಂಖ್ಯೆ ಬಹಳ ಜಾಸ್ತಿ ಇದೆ. ಅದರಮೇಲೆ ಪ್ರೆಷರ್ ಕಡಿಮೆ ಮಾಡಬೇಕು. ಆಗ ಪ್ರತಿ ಕುಟುಂಬಕ್ಕೂ ಜಮೀನು ಹೆಚ್ಚಾಗಿ ಸಿಕ್ಕುತ್ತದೆ ಎಂದು ಹೇಳಿದರು.—ಅವರು ಎರಡನೆ ಪಾಂಚವಾರ್ಷಿಕ ಯೋಜನೆಯನ್ನು ಸಂಪೂರ್ಣವಾಗಿ ಓದಿದ್ದಾರೆ ಎಂದು ನಾನು ಭಾವಿಸುತ್ತೇನೆ. ಅವರು ಒಂದು ಮಾತು ಹೇಳಲಿಲ್ಲ. ಎಷ್ಟು ಸಂಖ್ಯೆ ಜನರನ್ನು ಅಗ್ರಿಕಲ್ಚರಲ್ ಸೆಕ್ಟರ್‌ನಿಂದ ಇಂಡಸ್ಟ್ರಿಯಲ್ ಸೆಕ್ಟರ್‌ಗೆ ಪರಿವರ್ತಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಹೇಳಲಿಲ್ಲ. ಈಗ ಮೈಸೂರು ದೇಶದಲ್ಲಿ ಶೇಕಡ 71 ವ್ಯವಸಾಯಗಾರರು ಇದ್ದಾರೆ ಅವರಲ್ಲಿ ಕೆಲವರನ್ನು ವ್ಯವಸಾಯದ ಸೆಕ್ಟರ್‌ನಿಂದ ಬಿಡಿಸಿ ಬೇರೆ ಸೆಕ್ಟರ್‌ಗೆ ಸೇರಿಸುವುದಾದರೆ, ಅಲ್ಲಿನ ಪ್ರಗತಿ ಎಷ್ಟುಮಟ್ಟಿಗೆ ಸಾಧಿತವಾಗುತ್ತದೆ, ಇಂಡಸ್ಟ್ರೀ ಎಷ್ಟುಮಟ್ಟಿಗೆ ಮುಂದುವರಿಯುವುದಕ್ಕೆ ಸಾಧ್ಯವಾದೀತು ಎಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಈ ಶೇಕಡ 71ರಲ್ಲಿ ಶೇಕಡ ಐದು ಸಹ ಬೇರೆ ಕಡೆ ಎಂಪ್ಲಾಯ್ ಮಾಡುವುದಕ್ಕೆ ಕಷ್ಟವಿರುವಾಗ ಅದು ಸಾಧ್ಯವಿಲ್ಲದ ಮಾತು. ಈ ಫ್ರಾಗ್‌ಮೆಂಟೇಷನ್ ಮುಂದುವರಿಯುತ್ತಾ ಹೋದರೆ ಹಿಡುವಳಿದಾರರ ಜಾಸ್ತಿಯಾಗುತ್ತಾರೆ. ಅದರಿಂದ ವ್ಯವಸಾಯದಲ್ಲಿ ಪ್ರಗತಿಯಾಗುವುದಿಲ್ಲ. ಅದಕ್ಕೆ ಅವರು ಪೆಸೆಂಟ್ ಪ್ರೊಪ್ರೈಟರ್‌ಷಿಪ್ ಆಗಬೇಕು. 100 ಎಕರೆ ಇದ್ದರೂ ಸಾಧ್ಯ ಎಂದು ಹೇಳುತ್ತಾರೆ ಅದು ಹೇಗೆ ಸಾಧ್ಯವಾಗುತ್ತದೆ? ಭೂಮಿ ಎಲ್ಲಿಂದ ತರುತ್ತೀರಿ ಎಂಬುದನ್ನು ಅವರು ಹೇಳಲಿಲ್ಲ. ಒಟ್ಟಿನಲ್ಲಿ ವ್ಯವಸಾಯದ ಸೆಕ್ಟರ್‌ನಲ್ಲಿರತಕ್ಕ ಪ್ರೆಷರ್ ಕಡಿಮೆ ಮಾಡಬೇಕು, ಅವರಿಗೆ ಬೇರೆ ಕಡೆ ಎಂಪ್ಲಾಯ್‌ಮೆಂಟ್

ಕೊಡಬೇಕು. ಈಗಿರತಕ್ಕ ನಿರುದ್ಯೋಗ ಸಮಸ್ಯೆಯನ್ನೇ ನಿವಾರಣೆ ಮಾಡುವುದಕ್ಕೆ ಕಷ್ಟವಾಗಿರುವಾಗ ಇದು ಸಾಧ್ಯವಾಗುವುದಿಲ್ಲ. ಈಗಿರತಕ್ಕ ಮಾರ್ಗವನ್ನು ಜತ್ತೀಸಮಿತಿಯವರು ಸೂಕ್ಷ್ಮವಾಗಿ ಮಿಸಲೇನಿಯಸ್ ಚಾಪ್ಟರ್‌ನಲ್ಲಿ ಹೇಳಿದ್ದಾರೆ. ಅದು ಏನೆಂದರೆ ಕೋಆಪರೇಟಿವ್ ಫಾರ್ಮಿಂಗ್. ಅದನ್ನು ಸ್ವಲ್ಪ ವಿಶದವಾಗಿ ಅವರು ವಿಚಾರ ಮಾಡಿದ್ದರೆ ಚೆನ್ನಾಗಿತ್ತು ಎಂದು ನನ್ನ ಭಾವನೆ. ಹೈದರಾಬಾದ್‌ನಲ್ಲಿರತಕ್ಕ ಎರಡು ಮೂರು ಸೆಕ್ಷನ್‌ಗಳನ್ನು ನಾವು ಬಿಲ್ ಮಾಡುವಾಗ ನಮೂದಿಸಿದರೆ ಸಾಕು ಎಂದು ಅವರು ಹೇಳುತ್ತಾರೆ. ಬಹುಶಃ ಅದಕ್ಕೆ ಅವರು ಇನ್ನೂ ಹೆಚ್ಚು ಗಮನ ಕೊಡಬೇಕಾಗಿತ್ತು. ಕೋಆಪರೇಟಿವ್ ಫಾರ್ಮಿಂಗ್ ಎಂದು ಏನು ಹೇಳುತ್ತಾ ಇದ್ದೇವೆ ಅದು ಸಮರ್ಪಕವಾದ ವ್ಯವಸಾಯ ಪದ್ಧತಿ. ಅದು ಒಂದೇ ನಮಗೆ ಇರತಕ್ಕ ಮಾರ್ಗ. ಫ್ರ್ಯಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ ತಪ್ಪಿಸಬೇಕಾದರೆ ಅಥವಾ ಅದರಿಂದ ಆಗತಕ್ಕ ಅಡಚಣೆಯನ್ನು ತಪ್ಪಿಸಬೇಕಾದರೆ ಸಹಕಾರೀ ಪದ್ಧತಿಯಲ್ಲಿ ವ್ಯವಸಾಯವನ್ನು ನಡೆಸುವುದು ಒಂದೇ ನಮಗೆ ಗೊತ್ತಾಗಿರತಕ್ಕ ಮಾರ್ಗ. ಅದನ್ನು ನಾವು ಅನುಸರಿಸಬೇಕಾಗುತ್ತದೆ. ಈಗ ನಮ್ಮ ದೇಶದಲ್ಲಿ ಅದರ ವಿಚಾರವಾಗಿ ಒಂದು ಪ್ರಯತ್ನ ನಡೆದಿದೆ. ಅದರ ಬಗ್ಗೆ ಒಂದು ಅಭಿಪ್ರಾಯ ಇದೆ. ಇದು ಒಳ್ಳೆಯದೇ ಆದರೂ ಸಹ ಅಷ್ಟು ಚೆನ್ನಾಗಿ ನಡೆಯುತ್ತಿಲ್ಲ. ಆದ್ದರಿಂದ ಅದನ್ನು ಮುಚ್ಚೋಣ, ಬೇಡ ಎಂದು ಹೇಳುತ್ತಾರೆ. ನಾನಾದರೂ ಕೇಳುತ್ತೇನೆ. ಅವರು ಹೇಳುವಂತೆ ಇರುವುದು ಬೇಡ, ಮುಚ್ಚೋಣ. ಇನ್ನು ಬೇರೆ ಯಾವ ಮಾರ್ಗ ಇದೆ ಎಂಬುದನ್ನು ಹೇಳಿ. ಯಾರು ಬೇಡ ಅನ್ನುತ್ತಾರೆ? ಬೇರೆ ಮಾರ್ಗ ಇದುವರೆಗೂ ಯಾರಿಗೂ ಹೇಳುವುದಕ್ಕೆ ಆಗಿಲ್ಲ. ಎಂತೆಂತಹ ಪ್ರಾಜ್ಞರು ತಜ್ಞರು ವರದಿಮಾಡಿದ್ದಾರೆ, ಬೇರೆ ಕಡೆ ನೋಡಿ ಬಂದಿದ್ದಾರೆ, ರಷ್ಯದಲ್ಲಿ ನೋಡಿದ್ದಾರೆ, ಚೈನಾದಲ್ಲಿ ನೋಡಿದ್ದಾರೆ, ಎಲ್ಲಾ ಪದ್ಧತಿಯನ್ನು ಅರೆದು, ಸುರಿದು ನಮ್ಮ ಇಂಡಿಯಾ ದೇಶದಲ್ಲಿ ಸಹಕಾರಿ ಪದ್ಧತಿಯಮೇಲೆ ಸಮರ್ಪಕವಾದ ರೀತಿಯಲ್ಲಿ ವ್ಯವಸಾಯ ಮಾಡುವುದು ಒಂದೇ ಒಂದು ಮಾರ್ಗ ಎಂದು ಹೇಳಿದ್ದಾರೆ. ಈ ಪೆಸೆಂಟ್ ಪ್ರೊಪ್ರೈಟರ್‌ಷಿಪ್ ಎಂದು ಈ ವರದಿಯಲ್ಲಿ ಏನು ನಮೂದು ಮಾಡಿದ್ದಾರೆ ಇದು ಅಲ್ಟಿಮೇಟ್ ಐಡಿಯಲ್ ಅಲ್ಲ. ನಮ್ಮ ಅಲ್ಟಿಮೇಟ್ ಐಡಿಯಲ್ ಸಹಕಾರ ಪದ್ಧತಿಯ ಮೇಲೆ ವ್ಯವಸಾಯ ಮಾಡುವುದೇ ಆಗಿದೆ. ಪೆಸೆಂಟ್ ಪ್ರೊಪ್ರೈಟರ್‌ಷಿಪ್ ಇದು ಒಂದು ಹೆಜ್ಜೆ ಮಾತ್ರ. ಕೋಆಪರೇಟಿವ್ ಫಾರ್ಮಿಂಗ್ ಬಗ್ಗೆ ಇದುವರೆಗೂ ಆಗಿರತಕ್ಕ ಎಕ್ಸ್‌ಪೆರಿಮೆಂಟ್ fail ಆಗಿರುವುದರಿಂದ ಇದು ನಮ್ಮ ದೇಶಕ್ಕೆ ಹಿಡಿಸುವುದಿಲ್ಲ ಎಂಬತಕ್ಕ ರೀತಿಯಲ್ಲಿ ವಾದ ಮಾಡುತ್ತಾರೆ. ಇದುವರೆಗೂ fail ಆಗಿರುವುದಕ್ಕೆ ಕಾರಣವೇನು? ಮೊದಲನೆಯದಾಗಿ ಈ ಆಡಳಿತ ನಡೆಸತಕ್ಕ ಜನರಿಗೆ ಇದರಲ್ಲಿ ನಂಬಿಕೆ ಇಲ್ಲ. ಮುಚ್ಚಿಕೊಂಡು ಹೋದರೆ ಹೋಗಲಿ ಎನ್ನುವವರು. ಮೇಲ್ವಿಚಾರಕರಿಗೇ ಇದರಲ್ಲಿ ಆಸಕ್ತಿ ಇಲ್ಲದಮೇಲೆ ಇದು ಹೇಗೆ ನಡೆಯುತ್ತದೆ! ಇದು ಒಂದನೆಯ ನ್ಯೂನತೆ. ಮತ್ತೊಂದು ಏನೆಂದರೆ ಈ ಕೋಆಪರೇಟಿವ್ ಫಾರ್ಮಿಂಗ್ ಚೆನ್ನಾಗಿ ಬೆಳವಣಿಗೆ ಆಗಬೇಕಾದರೆ ಅದಕ್ಕೆ ಒಂದು ವಾತಾವರಣ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಜನರಿಗೆ

ಅನುಕೂಲವಾಗುವ ರೀತಿಯಲ್ಲಿ ಮಾಡಬೇಕಾದರೆ ಈ administrative set-up ಬೇರೆ ರೀತಿಯಲ್ಲಿರಬೇಕು. ಈಗ ಲ್ಯಾಂಡ್ ಕಮೀಷನ್ ಇದೆ. ಈ ಸಮಿತಿಯ ವರದಿಯಲ್ಲಿ ನಮೂದು ಮಾಡಿದ್ದಾರೆ. ಬರೀ ಒಂದು ಲ್ಯಾಂಡ್ ಕಮೀಷನ್ ಮಾಡಿದಾಕ್ಷಣಕ್ಕೇ ಇದೆಲ್ಲಾ ಸರಿಹೋಗುತ್ತದೆ, ನಾವು ತರುವ ಸುಧಾರಣೆಗಳೆಲ್ಲಾ ಸಮರ್ಪಕವಾಗಿ ನಡೆಯುತ್ತದೆ, ಜಾರಿಗೆ ತರುತ್ತೇವೆ ಎಂದು ಹೇಳುವುದು, ಆ hope ಅಷ್ಟಾಗಿ ಇದರಲ್ಲಿಲ್ಲ. ಕಾರಣ ಇಷ್ಟೆ. ಈಗಿರತಕ್ಕ ಮೆಷಿನರಿನಲ್ಲಿ ಜಾರಿಗೆ ತರಬೇಕಾದರೆ ಬಹಳ ಕಷ್ಟ ಇದೆ. ಒಂದೇ ಒಂದು ಉದಾಹರಣೆ ಕೊಡುವುದಾದರೆ ಹೋದವರ್ಷ ಸರಕಾರದ ಒಂದು ಆಜ್ಞೆ ಹೊರಡಿಸಿ, ಈ ವರದಿಯಲ್ಲೂ ಸಹ ವರದಿ ಮಾಡಿದ್ದಾರೆ, ಪೂರ್ವಭಾವಿಯಾಗಿ ಟೆನೆಂಟ್ಸ್‌ಯಾರು, ಲ್ಯಾಂಡ್ ಲಾರ್ಡ್ಸ್ ಯಾರು, ಯಾರು ಗುತ್ತಿಗೆ ಮಾಡುತ್ತಾರೆ, ಯಾರು ವಾರಕ್ಕೆ ಮಾಡುತ್ತಾರೆ ಎಂಬ ಲೆಕ್ಕ ಇಡಬೇಕೆಂದು ಹೇಳಿದರು. ಇವತ್ತಿನವರೆಗೂ ಸಹ ಆ ರಿಕಾರ್ಡ್ ಬಂದಿಲ್ಲ. ನಮ್ಮ ದೇಶದಲ್ಲಿರತಕ್ಕ ರೈತರು ಓದು ಬರಹ ಬಾರದವರು. ಬುದ್ಧಿವಂತರಾದ ಜಮೀನ್‌ದಾರರು ಬರೀ ಬಾಯಿಮಾತಿನಿಂದ ಒಪ್ಪಂದ ಮಾಡಿಕೊಂಡಿರುತ್ತಾರೆ. 10—6 ವರ್ಷ ಈ ರೀತಿ ವ್ಯವಸಾಯ ಮಾಡಿದವನ ಸ್ಥಿತಿ ದೇವರೇ ಗತಿ. ಅನೇಕ ಸದಸ್ಯರಿಗೆ ಇದರ ಸ್ವಂತ ಅನುಭವ ಇದೆ. 1/3 ಭಾಗ ಗುತ್ತಿಗೆ ಕೊಡುವುದು ಎಂದರೆ ಅವರು ಏನು ಹೇಳುತ್ತಾರೆ ಎಂದರೆ 1/3 ಭಾಗ ಗುತ್ತಿಗೆ ಕೊಡುವುದು ಯಾವಾಗ ಗೊತ್ತೇ? ಎಕರೆಗೆ 30 ಪಲ್ಲಾ ಆದರೆ ಆಗ 1/3 ಭಾಗ ಜಮೀನ್‌ದಾರರಿಗೆ ಕೊಡುವುದು ಎಂದು ಹೇಳಿ ಕೊಡತಕ್ಕ ಲಾಯರುಗಳೂ ಇದ್ದಾರೆ. ತಮಗಿರತಕ್ಕ ಜಮೀನು ಎಲ್ಲಿ ಹೋಗಿ ಬಿಡುತ್ತದೆಯೋ ಎಂದು ಹೇಳಿ misinterpret ಮಾಡಿರತಕ್ಕ ಸಂದರ್ಭ ನನಗೆ ಗೊತ್ತಿದೆ. ಹೀಗೆ ನಾನಾರೀತಿಯಲ್ಲಿ ನಮ್ಮ ಆಡಳಿತ ಯಂತ್ರ ಸಂಪೂರ್ಣವಾಗಿ ಸಹಕಾರಿಯಾಗಿಲ್ಲ. ಅದಕ್ಕೆ ಔಷಧಿ, ಒಂದೇ ಒಂದು ಮಾರ್ಗ ರಾಜಮಾರ್ಗ ಎಂದರೆ, ವಿಕೇಂದ್ರೀಕರಣ ಮಾಡಬೇಕು ಲ್ಯಾಂಡ್ ಕಮೀಷನ್ ಜೊತೆಗೆ ಪ್ರತಿಯೊಂದು ಹಳ್ಳಿಯಲ್ಲೂ ಸಹ ಒಂದೊಂದು ಕಮಿಟಿಯನ್ನು ನೇಮಕಮಾಡಿದರೂ ತಪ್ಪಾಗಲಾರದು.

ಇದರಲ್ಲಿ ಎಲ್ಲ ಜನರ ಪ್ರತಿನಿಧಿಗಳೂ ಇರುತ್ತಾರೆ, ಭೂಸುಧಾರಣೆಯಲ್ಲಿ ಆಗತಕ್ಕ ಅನುಕೂಲ ಅನಾನುಕೂಲಗಳೇನು ಎಂಬುದನ್ನು ತಿಳಿದುಕೊಳ್ಳಬಹುದು. ಪರಿಹಾರ ಗೊತ್ತುಮಾಡುವ ವಿಚಾರದಲ್ಲಾಗಲೀ, ಬರತಕ್ಕ ಉತ್ಪತ್ತಿ ಎಷ್ಟೆಂಬುದನ್ನು ಲೆಕ್ಕ ಮಾಡುವಾಗ ಆಗಲಿ ಪ್ರತಿಹಳ್ಳಿಯಲ್ಲಿಯೂ ಒಂದೊಂದು ಸಮಿತಿಯನ್ನು ಮಾಡಬಹುದು. ಅಸಾಧ್ಯವಾದರೆ, ನಾಲ್ಕಾರು ಹಳ್ಳಿಗಳನ್ನು ಸೇರಿಸಿ ಅಲ್ಲಿನ ಪ್ರತಿನಿಧಿಗಳ ಸಮಿತಿಯನ್ನು ರಚನೆಮಾಡಿ ಅವರಿಂದ ಸಹಾಯ ತೆಗೆದುಕೊಳ್ಳುವುದು ಸೂಕ್ತ. ಆರೀತಿ ಮಾಡಿದರೆ ಭೂಸುಧಾರಣೆಯಿಂದ ಯಾವ ಅನುಕೂಲ ಜನರಿಗಾಗುತ್ತದೆಂದು ಹೇಳುತ್ತೇವೋ ಅದು ಅವರಿಗೆ ದೊರೆಯುವುದಕ್ಕೆ ಸಾಧ್ಯವಾಗುತ್ತದೆಂದು ಸಲಹೆ ಮಾಡುತ್ತೇನೆ. ಗ್ರಾಮ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಮಸೂದೆ ಬರುತ್ತದೆಂದು ಹೇಳುತ್ತಿದ್ದಾರೆ. ಡಿಸ್ಟ್ರಿಕ್ಟ್ ಬೋರ್ಡ್, ಗ್ರಾಮಪಂಚಾಯಿತಿ, ಭೂಸುಧಾರಣೆ ಇವುಗಳಲ್ಲಿ ಪರಸ್ಪರ ಸಂಬಂಧವನ್ನು ಕಲ್ಪಿಸುವುದು ಅಗತ್ಯ. ಗ್ರಾಮ ಪಂಚಾಯಿತಿಗಳಿಗೆ ದೊಡ್ಡ ಜವಾಬ್ದಾರಿಯನ್ನು ಕೊಡಬೇಕಾಗುತ್ತದೆ. ಜಮೀನಿನ ವಿಚಾರದಲ್ಲಿಯೂ ಹೆಚ್ಚು ಆಸಕ್ತಿ ವಹಿಸುವುದಕ್ಕಾಗಲೀ ವ್ಯವಹಾರದಲ್ಲಿ ಕಟ್ಟಿನ ಕಾನೂನಿನ ಬಲವನ್ನು ಈ ಗ್ರಾಮಪಂಚಾಯಿತಿಗಳಿಗೆ ಕೊಡುವುದರಿಂದ ಭೂಸುಧಾರಣೆಗೆ ಹೆಚ್ಚು ಸಹಕಾರಿಯಾಗುತ್ತದೆಂದು

(ಶ್ರೀ ಡಿ. ದೇವರಾಜ ಅರಸ್)

ಈ ಒಂದು ಸಲಹೆಯನ್ನು ಸಭೆಯ ಮುಂದಿಡುತ್ತಿದ್ದೇನೆ. ಇದಕ್ಕೆ ಪ್ರತಿವಾದವನ್ನು ಹೂಡಬಹುದು. ಈಗಾಗಲೇ ಗ್ರಾಮ ಪಂಚಾಯಿತಿಗಳಲ್ಲಿರುವ ನ್ಯೂನತೆಗಳು ಗೊತ್ತಿವೆ, ಹಳ್ಳಿಗಳಲ್ಲಿ ಪಕ್ಷ ಪಂಗಡಗಳು ಹೆಚ್ಚಿವೆ. ಆದಕಾರಣ ಇಂಥಾ ಕೆಲಸ ಗ್ರಾಮ ಪಂಚಾಯಿತಿಗಳಿಂದ ಸಾಧ್ಯವಿಲ್ಲ ಎಂದು ಹೇಳಬಹುದು. ಈ ರೀತಿಯ ಗೊಂದಲ ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರವಲ್ಲ, ದೊಡ್ಡ ದೊಡ್ಡ ಪಟ್ಟಣಗಳ ಮುನಿಸಿಪಾಲಿಟಿಗಳಲ್ಲಿಯೂ ಇದೆ. ಶ್ರೀಮಾನ್ ಚನ್ನಬಸಪ್ಪನವರು ಕಲ್ಕತ್ತೆಗೆ ಹೋಗಿದ್ದಾಗ ನಡೆದ ಒಂದು ಪ್ರಸಂಗವನ್ನು ನನಗೆ ಹೇಳಿದರು. ಒಬ್ಬ ಗ್ರ್ಯಾಜುಯೇಟ್ ಟ್ಯಾಕ್ಸಿ ಡ್ರೈವರನನ್ನು ಅಲ್ಲಿನ ಮುನಿಸಿಪಲ್ ಕಾರ್ಪೊರೇಷನ್ ಹೇಗೆ ಕೆಲಸ ಮಾಡುತ್ತಿದೆ ಎಂದು ಕೇಳಿದಾಗ, ನಮ್ಮೂರಿನಲ್ಲಿ ಕಾರ್ಪೊರೇಷನ್ನೇ ಇಲ್ಲವೆಂದು ಹೇಳಿದನಂತೆ. ಕಾರ್ಪೊರೇಟರುಗಳಿದ್ದಾರೆಯೇ ಎಂದು ಕೇಳಿದಾಗ ಕಾರ್ಪೊರೇಟರುಗಳೂ ಇಲ್ಲವೆಂದು ಹೇಳಿದನಂತೆ. ಹೀಗೆ ಎಂಥೆಂಥಾ ದೊಡ್ಡ ಪಟ್ಟಣಗಳಲ್ಲಿಯೂ ಅವ್ಯವಸ್ಥೆ ಇದೆ. ಹೀಗೆ ಅವ್ಯವಸ್ಥೆ ಇದೆ ಎಂದು ಹೇಳತಕ್ಕ ಸೋಗಿನಲ್ಲಿ ಹಳ್ಳಿಯ ಜನರಿಗೆ ಆಡಳಿತದ ಬಗ್ಗೆ ಹೆಚ್ಚು ಜವಾಬ್ದಾರಿಯನ್ನು ಕೊಡಬಾರದೆಂದು ವಾದ ಮಾಡುವುದು ಸರಿಯಲ್ಲ. ಅವರು ಒಂದು ವೇಳೆ ತಪ್ಪುಮಾಡಿದರೆ ಅವರಿಗೇ ಅನಾನುಕೂಲವಾಗುತ್ತದೆ. ಅವರೇ ಬುದ್ಧಿ ಕಲಿಯುತ್ತಾರೆ. ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಆಡಳಿತ ಜವಾಬ್ದಾರಿಯನ್ನು ಅಧಿಕಾರವನ್ನೂ ಕೊಡಬೇಕು.

ಒಟ್ಟಿನಲ್ಲಿ ಈ ಸಮಿತಿಯ ಸಲಹೆಗಳನ್ನು ಒಪ್ಪುತ್ತೇನೆ. ವಿವರಗಳನ್ನು ಈಗ ಪ್ರಸ್ತಾಪ ಮಾಡಲು ಕಾಲಾವಕಾಶವಿಲ್ಲ. ಅಲ್ಲದೆ ಈ ಸಂದರ್ಭದಲ್ಲಿ ಹಾಗೆ ಮಾಡಬೇಕಾದ ಅಗತ್ಯವೂ ಇಲ್ಲವೆಂದು ಭಾವಿಸುತ್ತೇನೆ. ಏಕೆಂದರೆ ಮಸೂದೆಯಾಗಿ ನಮ್ಮ ಮುಂದೆ ಬರುವ ಸಂಭವವಿದೆ, ಆಗ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಸೂದೆಯಾಗಿ ನಮ್ಮ ಮುಂದೆ ಬರುತ್ತದೆಯೇ ?

ಶ್ರೀ ಡಿ. ದೇವರಾಜಅರಸ್.—ಬರುತ್ತದೆ, ಆ ವಿಷಯದಲ್ಲಿ ಸಂಶಯವೇನಿಲ್ಲ. ಆಗಿಯೇ ಆಗುತ್ತದೆಂಬ ಭರವಸೆಯನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳಬಹುದು. ನಮಗೆ ಬಂದಾಗ ಮಾತನಾಡುತ್ತೇನೆ. ಒಟ್ಟಿನಲ್ಲಿ ಈ ವರದಿಗೆ ನಾನು ಬೆಂಬಲ ಕೊಡುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಹತ್ತು ದಿವಸಗಳ ಕಾಲ ಚರ್ಚೆ ನಡೆದು ಅನೇಕ ಸದಸ್ಯರುಗಳು ಈ ಜಟಿಲವಾದ ಜತ್ತಿಯ ವರದಿಯ ಮೇಲೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ......

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಶ್ರೀಮಾನ್ ಜತ್ತಿಯವರನ್ನು ಜಟಿಲವಾದದವರೆಂದು ಹೇಳುತ್ತಿದ್ದಾರೆ ! (ನಗು !)

[MR. SPEAKER in the Chair.]

ಶ್ರೀ ವೈ. ವೀರಪ್ಪ.—ಈ ವರದಿಯಲ್ಲಿರುವ ಸಲಹೆಗಳ ಬಗ್ಗೆ ನಾನಾ ರೀತಿಯ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಸಮತಾವಾದವನ್ನು ನಾನೂ ಒಪ್ಪುತ್ತೇನೆ, ನನ್ನ ಪಕ್ಷದ ಇತರರೂ ಒಪ್ಪಿದ್ದಾರೆ. ಆದರೆ ಇಂಥ ಸಮಾಜವನ್ನು ರಚನೆ ಮಾಡಬೇಕಾದರೆ, ಸಮಾಜದಲ್ಲಿರತಕ್ಕ ಎಡರು ತೊಡರುಗಳೇನೆಂಬುದನ್ನು ಪೂರ್ವಭಾವಿಯಾಗಿ ಪರಿಶೀಲನೆ ಮಾಡಿ ಇಂಥ ಸಮತೆಯನ್ನುಳ್ಳ ಸಮಾಜ ರಚನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದು ಕಾರ್ಲ್ ಮಾರ್ಕ್ಸ್ ಹೇಳಿದಹಾಗೆ ಕೇವಲ ಇನ್ನೂರು ಮುನ್ನೂರ ವರ್ಷಗಳಿಂದ ಬಂದ ವಾದವಲ್ಲ. ಸಾವಿರಾರು ವರ್ಷಗಳ ಹಿಂದೆ ವೇದಗಳ ಕಾಲದಿಂದಲೂ ಬಂದಿರುವುದು. ಆದರೂ 1926 ನೆಯ ಇಸವಿಯಿಂದಲೂ ಕಾಂಗ್ರೆಸ್ ಸಂಸ್ಥೆಯವರು ಬಹಳ ಪ್ರಯಾಸಪಟ್ಟರೂ ಕೂಡ ಇಂಥಾ ಸಮಾಜವನ್ನು ರಚನೆಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಜಯಪ್ರಕಾಶ್‌ನಾರಾಯಣ್‌ರವರೂ ಕೃಪಲಾನಿಯವರೂ ಸಮತಾವಾದಿ ಸಮಾಜವನ್ನು ಸ್ಥಾಪನೆಮಾಡಬೇಕೆಂದು ಕಾಗ್ರೆಸ್ ಸಂಸ್ಥೆಯಿಂದ ಹೊರಗೆ ಬಂದು ಹೇಳಿದರು. ಚೈನಾದೇಶದಲ್ಲಿ ಪ್ರವಾಸ ಮಾಡಿಕೊಂಡು ಬಂದ ಪಂಡಿತ್ ನೆಹರೂರವರೂ ಕೂಡ Socialistic pattern of society ಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಘೋಷಿಸಿದರು. ದೇಶದಲ್ಲಿ ನಿಜವಾಗಿಯೂ ಇಂಥಾ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ದಕ್ಷರಾದವರಿದ್ದಾರೆಯೇ, ಸೂಕ್ತವಾದ ವಾತಾವರಣವನ್ನು ಕಲ್ಪಿಸಿದ್ದಾರೆಯೇ ಎನ್ನುವುದನ್ನು ವಿಚಾರಮಾಡಿ ನೋಡಿದರೆ, ನಿಜವಾಗಿಯೂ ವಿಷಾದವಾಗುತ್ತದೆ. ಜಮೀನಿಲ್ಲದೇಯಿರುವವರಿಗೆ ಜಮೀನನ್ನು ಹಂಚಬೇಕೆಂಬ ವಾದವನ್ನು ಒಪ್ಪಿದರೂ ಕೂಡ, ಈ ವಿಚಾರದಲ್ಲಿ ನನ್ನ ಅಭಿಪ್ರಾಯಗಳನ್ನು ಸಭೆಯ ಮುಂದಿಡಲು ಪ್ರಯತ್ನ ಮಾಡುತ್ತೇನೆ. ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿದು ಎರಡನೆ ಯೋಜನೆಯ ಅವಧಿಯಲ್ಲಿ ಈಗಾಗಲೇ ಒಂದು ವರ್ಷವಾಗಿದೆ. ಈಗಾಗಲೇ 2,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎರಡನೆಯ ವರ್ಷದಲ್ಲಿ ಒಂದೂವರೆ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಮತ್ತೆ ವರ್ಷಕ್ಕೆ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಆಹಾರವನ್ನು ಆಮದು ಮಾಡುತ್ತಿದ್ದೇವೆ. ಮುಂದೆ ನಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿ, ನಮ್ಮ ಜನರನ್ನು ಶಾಂತಿಯ ಮಡಿಲನಲ್ಲಿಡುತ್ತೇವೆ ಎಂಬ ವಾದವನ್ನು ಹೇಳುತ್ತಿದ್ದಾರೆ. 1947ನೆಯ ಇಸವಿಯಲ್ಲಿ ಆಹಾರದ ಕೊರತೆಯನ್ನು ಪರಿಹಾರಮಾಡಿ ದೇಶದಲ್ಲಿ ಸುಖಶಾಂತಿಯನ್ನು ತರುತ್ತೇವೆಂದು ಸಾರಿದರು. ಆದರೆ ಅಂಕಿಅಂಶಗಳನ್ನು ನೋಡಿದರೆ, ಯಾವುದೋ ಕಾರಣಗಳನ್ನು ಹೇಳಿಕೊಂಡು ಆಹಾರ ಅಭಾವವನ್ನು ಈಹೊತ್ತಿನವರೆಗೂ ನೀಗುವುದಕ್ಕೆ ಆಗಿಲ್ಲ. ಸರಿಯಾದ ರೀತಿಯಲ್ಲಿ ವ್ಯವಸಾಯ ಕೆಲಸಕಾರ್ಯಗಳು ಕಾರ್ಯಗತವಾಗದೇ ಯಿದ್ದುದರಿಂದ ಆಗಲಿಲ್ಲ, ಅಥವಾ ಮಿಕ್ಕ ನೀರಾವರಿ ಯೋಜನೆಗಳನ್ನು ಮಾಡುತ್ತಿದ್ದೇವೆ ಎನ್ನುವ ವಾದಗಳನ್ನು ಸರ್ಕಾರ ಹೇಳುತ್ತಿರುವುದನ್ನು ಕೇಳಿದ್ದೇವೆ. ಹೀಗಿರುವಾಗ ಇಂಥಾ ಭೂ ಸುಧಾರಣೆಗೆ ಸಂಬಂಧಪಟ್ಟ ಒಂದು ಕಾನೂನನ್ನು ದೇಶದ ಮುಂದಿಡಬೇಕಾದರೆ, ಇದರ realistic approach ಏನೆಂಬುದನ್ನು ತಿಳಿದು, ಇದು ಸಾಧ್ಯವೆ ಅಥವಾ ಅಸಾಧ್ಯವೆ ಎನ್ನುವುದನ್ನು ನೋಡಬೇಕಾಗಿದೆ. ನಮಗೆ ಸಿಕ್ಕಿರುವ ಅಂಕಿಅಂಶಗಳನ್ನು ನೋಡಿದರೆ, ಕಳೆದ ಮೂರು ವರ್ಷಗಳಲ್ಲಿ 70 ಕೋಟಿ ರೂಪಾಯಿಗಳನ್ನು ಆಹಾರ ರವಾನೆಗೆ ಖರ್ಚುಮಾಡಿದ್ದೇವೆ. ಮುಂದೆ ಬರುವ ಐದು ವರ್ಷಗಳಲ್ಲಿ ಹನ್ನೊಂದು ಹನ್ನೆರಡು ಲಕ್ಷ ಮಿಲಿಯ ಟನ್ಗಳಷ್ಟು ಆಹಾರವನ್ನು ಆಮದುಮಾಡಬೇಕಾಗಿದೆ.

ಐದಾರು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಖರ್ಚುಮಾಡಬೇಕಾಗಿದೆ.

ಎರಡನೇ ಪಂಚವಾರ್ಷಿಕ ಯೋಜನೆಯ ಧ್ಯೇಯ ಮುಖ್ಯ ಗುರಿ ಏನು ಇದೆ ಎಂದರೆ :—

You must give land to the tiller. We must augment the production, eradicate poverty and bring about economic equality and there must be agrarian reforms. These are the important fundamental features contemplated in the Second Five-Year Plan.

ಯಾವರೀತಿ ಆಹಾರ ಅಭಾವವನ್ನು ಪರಿಹರಿಸಬೇಕು ಎಂಬುದನ್ನು ಸ್ವಲ್ಪ ಮಟ್ಟಿಗೆ ಪರಿಶೀಲನೆ ಮಾಡಬೇಕಾಗಿದೆ. ಜತ್ತಿ ಸಮಿತಿ ವರದಿಯಲ್ಲಿ ಸಹ ಈ ರೀತಿ ಹೇಳಿದೆ :—

> (1) elimination of the landlord-tenant relationship and (2) redistribution of land to satisfy the aspirations of the landless.

ಕೇವಲ ಭೂ ಹೀನರ ಆಶೋತ್ತರಗಳನ್ನು ಪೂರೈಸುವುದಕ್ಕೆ ಈ reforms ತಂದಿದ್ದಾರೆಂದು ವರದಿಯಲ್ಲಿ ಹೇಳಿದೆ. ಈ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರತಕ್ಕ ಅನೇಕ ಮಾನ್ಯ ಸದಸ್ಯರ ಆಶಯ, ಕನಿಕರ, ಆಕಾಂಕ್ಷೆ, ಹೆಚ್ಚಾಗಿ ಮಧ್ಯಮವರ್ಗದವರಮೇಲೆ ಇದೆ. ಇವತ್ತಿನ ದಿವಸ ವ್ಯವಸಾಯಕ್ಕೆ ಯೋಗ್ಯವಾಗಿದ್ದರೂ ಸಾಗುವಳಿಯಾಗದೇ ಇರುವ ಜಮೀನು ದೇಶದಲ್ಲಿ ಎಷ್ಟೆಷ್ಟು ಇದೆ ಎಂಬುದನ್ನು ಯೋಚನೆ ಮಾಡಬೇಕು. ತುಂಗಭದ್ರಾ ಯೋಜನೆ, ವಾಣಿ ವಿಲಾಸ ಅಚ್ಚುಕಟ್ಟು, ನುಗು ಜಲಾಶಯ ಮುಂತಾದ ದೊಡ್ಡ ದೊಡ್ಡ ಯೋಜನೆಗಳಲ್ಲಿರತಕ್ಕ ಪ್ರದೇಶದಲ್ಲಿ ಎಲ್ಲ ಜಮೀನುಗಳಲ್ಲಿ ವ್ಯವಸಾಯ ಮಾಡಲಾಗುತ್ತಿದೆಯೇ ಎಂಬುದನ್ನು ಪರಿಶೀಲನೆ ಮಾಡಿದರೆ ಖಂಡಿತವಾಗಿ ಆ ರೀತಿ ಮಾಡಿಲ್ಲವೆಂದು ಕಂಡುಬರುತ್ತದೆ. ಅಂಥ ಸ್ಥಳಗಳಲ್ಲಿ ಸಾಕಷ್ಟು ರೈತರು ವ್ಯವಸಾಯಮಾಡಲು ಸಿಕ್ಕುವುದಿಲ್ಲ ಎಂದು ನಮ್ಮ ಹಣಕಾಸಿನ ಮಂತ್ರಿಯವರು ಒಂದು ಸಾರಿ ಅದಕ್ಕೆ ಉತ್ತರಕೊಟ್ಟಿದ್ದಾರೆ. ಅದನ್ನೇ P.W.D. ಮಂತ್ರಿಗಳು ಸಹ ಅದೇರೀತಿಯಾಗಿ ಹೇಳಿದ್ದಾರೆ. ಇನಾಮ್ ರದ್ದಿಯಾತಿ ಕಾನೂನು ಪಾಸ್ ಆಗಿದೆ. ಇವತ್ತಿನ ದಿವಸ ಅದು ಸರಿಯಾಗಿ ಜಾರಿಗೆ ಬಂದಿದೆಯೇ ಎಂದರೆ ಇಲ್ಲವೆಂದು ಹೇಳಬೇಕಾಗುತ್ತದೆ. ಇವತ್ತಿನ ದಿವಸ ಇನಾಮ್ ಭೂಮಿಗಳಲ್ಲಿ ಶೇಕಡಾ 75 ರಷ್ಟು ರೈತರು ಸಾಗುಮಾಡುತ್ತಿದ್ದಾರೆ. ಇನಾಂದಾರರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಭೂ ಮಾಲೀಕರಿಗೆ ಪರಿಹಾರ ಕೊಟ್ಟಿದ್ದರೆ ಈ ಸಮಸ್ಯೆ ಸುಲಭವಾಗಿ ಬಗೆಹರಿಸಬಾಗುತ್ತಿತ್ತು. ಈ ಸಮಸ್ಯೆಯಲ್ಲಿ ಅನೇಕ ತೊಂದರೆಗಳು ಉಂಟಾಗಿವೆ. ಇಂದು ನಮ್ಮ ಮುಂದೆ ಒಂದು ವಿಚಿತ್ರವಾದ ಪರಿಸ್ಥಿತಿ ಇದೆ. ದೇಶದಲ್ಲಿ ಸಾಗುವಳಿಗೆ ಯೋಗ್ಯವಾಗಿರತಕ್ಕ ಭೂಮಿ ಸುಮಾರು 267·8 ಲಕ್ಷ ಎಕರೆಗಳಷ್ಟು ಇದ್ದು ಅದು ಸಾಗುವಳಿಯಾಗುತ್ತಿತ್ತು. ಇದರಲ್ಲಿ 61·4 ಲಕ್ಷ ಎಕರೆ ಭೂಮಿಯಲ್ಲಿ ಮಾತ್ರ ರೈತರು ವ್ಯವಸಾಯ ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ 50 ದಶಲಕ್ಷ ಎಕರೆ ಭೂಮಿ ಪಾಳು ಬಿದ್ದಿದೆ. ಬಹುಭಾಗ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದ್ದರೂ ಕೂಡ ಕಾರಣಾಂತರದಿಂದ ವ್ಯವಸಾಯವಾಗದೆ ಇವತ್ತಿನ ದಿವಸ ಪಾಳುಬಿದ್ದಿದೆ. ಕಳೆದ ಹತ್ತು ವರ್ಷಗಳಲ್ಲಿ ಆಹಾರ ಅಭಾವ ನಮ್ಮ ದೇಶದಲ್ಲಿ ಇದೆ. ರೈತರಿಗೆ ಭೂಮಿಯನ್ನು ಹಂಚಿಕೊಡುವ ಕೆಲಸ ಸರಿಯಾಗಿ ನಡೆಯುತ್ತಿಲ್ಲ.

> "Distribution of land to satisfy the aspirations of the landless"

ಮೊದಲು ಭಗವಂತನು ನಮಗೆ ಕೊಟ್ಟಿರುವುದು ಇಷ್ಟು ಜಮೀನು. ಆದರೆ ಈಗ ದೇಶದಲ್ಲಿ ಜನಸಂಖ್ಯೆ ಹೆಚ್ಚಾಗಿ ಬೆಳೆಯುತ್ತಾ ಇದೆ.

Sri B. D. JATTI (Jamkhandi).—According to agricultural statistics of the reorganised State, the total waste land is 15 lakhs acres. So, I think there is no substance at all in talking that there are 53 lakhs.

ಶ್ರೀ ವೈ. ವೀರಪ್ಪ.—ಈ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ. ವ್ಯವಸಾಯಗಾರರ ಆಶೋತ್ತರಗಳನ್ನು ಯಾವರೀತಿ ಈಡೇರಿಸಿದ್ದಾರೆ ಎಂದು ಕೇಳಬೇಕಾಗಿದೆ. ಸಾಮಾನ್ಯವಾಗಿ ಕಾಂಗ್ರೆಸ್ ಪಕ್ಷದ ಧ್ಯೇಯ Socialistic pattern of society ಅಂದರೆ ಸಮಾಜವಾದಿ ಸಮಾಜರಚನೆ ಮಾಡುವುದೇ ಆಗಿದೆ. ಪ್ರಜಾಪ್ರಭುತ್ವದಲ್ಲಿ ಪೂರ್ಣ ನಂಬಿಕೆಯಿದೆ ಎಂದು ಕಾಂಗ್ರೆಸ್ಸು ಅನೇಕ ಸಲ ಠರಾವು ಪಾಸ್‌ಮಾಡಿದೆ. ನಮ್ಮ ಪ್ರಜಾ ಸೋಷಿಯಲಿಸ್ಟ್ ಪಕ್ಷವೂ ಸಹ ಅದೇ ಧ್ಯೇಯವನ್ನು ಇಟ್ಟುಕೊಂಡು ಜನತೆಯಲ್ಲಿಯ ಅಂತರವನ್ನು ಕಡಿಮೆ ಮಾಡಿ ಜೀವನಮಟ್ಟ ಮೇಲಕ್ಕೆ ಏರುವಂತೆ ಮಾಡಿ ಸರ್ವೇ ಸಾಮಾನ್ಯವಾಗಿ ಜನ ಸಾಮಾನ್ಯರಲ್ಲಿ ಸಾಮರಸ್ಯವಿರುವ ಸಮಾಜ ನಿರ್ಮಾಣ ಮಾಡಬೇಕೆಂದು ನಾವೂ ಸಹ ಸಾರಿದ್ದೇವೆ. ಇಂಥ ಸಮಾಜ ರಚನೆಯಾಗಬೇಕಾಗಿದೆ. ಇದಾಗಬೇಕಾದರೆ ದೇಶದಲ್ಲಿರುವ ಆಹಾರ ಅಭಾವ ಹೋಗಬೇಕು. ಪ್ರತಿಯೊಬ್ಬರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು.

We must bring this socialism, distribution of land and distribution of wealth in all sectors simultaneously. ನಾವು step by step ಪ್ರಗತಿ ಮಾರ್ಗದಲ್ಲಿ ಹೋಗಬೇಕೆಂದು ಶ್ರೀ ದೇವರಾಜ ಅರಸ್ ಅವರು ಹೇಳಿದ್ದಾರೆ. ಹಾಗಾದರೆ ವ್ಯವಸಾಯ ಕ್ಷೇತ್ರದಲ್ಲಿ ಮೊದಲು ಯಾಕೆ ಈ ಸುಧಾರಣೆಗಳನ್ನು ತರಬೇಕು ? ಬೇರೆ ರಂಗಗಳಲ್ಲಿ ಯಾಕೆ ತರಬಾರದು ಎಂಬುದನ್ನು ಪರಿಶೀಲನೆ ಮಾಡಿ ನೋಡಬೇಕು. ನಮ್ಮ ದೇಶದಲ್ಲಿ ಪದೇ ಪದೇ ಆಹಾರ ಅಭಾವದ ಪರಿಸ್ಥಿತಿ ಇದೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಕೋಟ್ಯಾಂತರ ಟನ್ ಆಹಾರ ಧಾನ್ಯ ಪರದೇಶಗಳಿಂದ ತರಿಸುತ್ತಿದ್ದೇವೆ. ವ್ಯವಸಾಯ ಕ್ಷೇತ್ರದಲ್ಲಿಯ ವಾತಾವರಣವನ್ನು ಕಲಕಿದರೆ ಆಹಾರ ಉತ್ಪತ್ತಿ ಜಾಸ್ತಿಯಾಗುವುದಿಲ್ಲ. ಸಮಾಜವಾದೀಪದ್ಧತಿಯ ಸಮಾಜ ರಚನೆಯಾಗಬೇಕು. ವ್ಯವಸಾಯ ಕ್ಷೇತ್ರದಲ್ಲಿ fragmentation ಆಗಬಾರದು, mechanised form of cultivation ಮಾಡಬೇಕು, consolidation of holdings ಆಗಬೇಕು ಎಂದು ಹೇಳುತ್ತಾರೆ. ಆದರೆ ನಿಜವಾಗಿಯೂ fragmentation ಆಗುತ್ತದೆಯೇ ವಿನಾ consolidation ಆಗುತ್ತಿಲ್ಲ.

12-30 P.M.

ನೀವು ಒಂದು ಯಂತ್ರದೃಷ್ಟಿಯಿಂದ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕು, ಈಗಿನ ಸಮಯದಲ್ಲಿ ಹೆಚ್ಚಾಗಿ ಆಹಾರವನ್ನು ಒದಗಿಸಬೇಕು ಎಂದು ಅನೇಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ

(ಶ್ರೀ ವೈ. ವೀರಪ್ಪ)

ಯಂತ್ರಸಾಮುಗ್ರಿ ತಂದಿರುವುದನ್ನು ವಾಪಸು ಕಳುಹಿಸ ಬೇಕಾಗುತ್ತದೆ. ಎಷ್ಟು ಹಣ ಇದಕ್ಕೆ ಖರ್ಚುಮಾಡಿ ದ್ದೀರಿ, ಇದನು ವಾಪಸ್ಸು ಕೊಂಡುಕೊಳ್ಳುವ ಗಿರಾಕಿ ಮಾರ್ಕೆಟ್ಟಿನಲ್ಲಿದೆಯೇ ಎಂದು ಪರಿಶೀಲನೆ ಮಾಡಿದರೆ ಒಂದು ತರಹ ಸಮಾಜ ರಚನೆಮಾಡುವುದಕ್ಕೆ ಹೋಗಿ ಬಡತನ ತರುತ್ತೀರಿ, ಆಲೋಚನೆ ಮಾಡಿ ತಂದಿಲ್ಲ ಎಂದು ಸವಾಲು ಹಾಕುತ್ತೇನೆ. ಕೇವಲ ಅಂಕಿ ಅಂಶ ಸರಿಯಾದ ರೀತಿಯಲ್ಲಿ ಪರಿಶೀಲನೆಮಾಡದೆ ಪ್ರಜಾ ಪ್ರಭುತ್ವ ಸರ್ಕಾರ ಸಮಾಜದ ಸರ್ವತೋಮುಖವಾದ ಅಭಿಪ್ರಾಯ ತೆಗೆದುಕೊಳ್ಳದೆ ಆತುರದ ಒಂದು ಕಾನೂನು ಮಾಡಿ ಆಹಾರದ ಅಭಾವ ಹೆಚ್ಚಿಸಲು ಅವಕಾಶಮಾಡುತ್ತಿದೆ. ಭೂಸುಧಾರಣೆ ಪ್ರಸಕ್ತ ಪರಿಸ್ಥಿತಿಯಲ್ಲಿ ಖಂಡಿತವಾಗಿ ಬೇಡ. ನೀವು ಬಿಲ್ಲು ತಯಾರಿಸಬಹುದು, ಜನರ ಅಕೋಶ್ರ ನಿಮಗೆ ಗೊತ್ತಿರಬಹುದು. ಆದರೆ ಈ ಸಂದರ್ಭದಲ್ಲಿ ವಾತಾ ವರಣ ಕಲಕಿದರೆ ನೀವಾಗಿಯೂ ಕೂಡ ನಿಮ್ಮ ಗುರಿ, ಸಮತಾವಾದದ ರೀತಿ ಸಮಾಜ ರಚನೆ ಮಾಡುತ್ತೇ ವೆಂದು ಹೇಳುವುದು ಖಂಡಿತ ಸಾಧನೆಯಾಗುವುದಿಲ್ಲ, ಅಲ್ಲಕಲ್ಲೋಲವಾಗುತ್ತದೆ. ಪ್ರೊಸೀಡಿಂಗನಲ್ಲಿ ನಾನು ಹೇಳಿದಮಾತು ಇರುತ್ತದೆ, ನಮ್ಮ ಅನಭವ ಜನರಿಗೆ ಗೊತ್ತಾಗುತ್ತದೆ ಸಣ್ಣ ವ್ಯವಸಾಯಗಾರನ ಪರ ವಾಗಿ ವಾದಿಸಿದ್ದಾರೋ ಅಥವಾ ಕೇವಲ ಜಮೀನು ದಾರರಪರವಾಗಿ ವಾದಿಸಿದ್ದಾರೋ ಎಂಬುದನ್ನು ಕಾನೂನು ತಂದ ಕೆಲವಾರು ತಿಂಗಳಲ್ಲಿ ಅಥವಾ ವರ್ಷಗಳಲ್ಲಿ ನೀವೂ ಕೂಡ ಅನುಭವ ಪಡೆಯುತ್ತೀರಿ ಎಂದು ಖಂಡಿತವಾಗಿ ಹೇಳುತ್ತೇನೆ.

The landlord lessor is oppressing the tenant lessee ಎಂದು ಹೇಳಿ ಜಮೀನಿನಿಂದ ಎವ ಜಮೀನುದಾರನನ್ನು ಕಟ್ಟಿ ಹೊರಗೆ ಕಳುಹಿಸಬೇಕೆಂದು ಹೇಳುತ್ತೀರಿ, ಈ ದಿವಸ ಜಮೀನುದಾರರನ್ನು ಎಂಗಡಿ ಸಿದ್ದೀರಾ ! ಬಡವನಾಗಲಿ, ಕೂಲಿಮಾಡಿ ಜೀವನ ಮಾಡುವವನಾಗಲಿ, ಅವನಿಗೆ ಸ್ವಲ್ಪ ಜಮೀನಿದ್ದರೆ ಕಿತ್ತುಕೊಳ್ಳುತ್ತೀರಿ. ಉತ್ಪತ್ತಿ ಸಾಲದೆ ಜವಾನರಾಗಿ ಅಥವಾ ದಫೇದಾರರಾಗಿ ಕೆಲವರು ಕೆಲಸಮಾಡು ತ್ತಿದ್ದಾರೆ. ಈ ದಿವಸ ಅವರಿಗೆ ಮಂಡ್ಯದಲ್ಲಿ ಜಮೀ ನಿರಬಹುದು ; ಬೆಂಗಳೂರಿನಿಂದ 60 ಮೈಲಿ ದೂರದಲ್ಲಿ ಅವರಿರಬಹುದು. ಅಂಥವರು ಸ್ವಂತ ಸಾಗುವಳಿ ಮಾಡುವುದಿಲ್ಲ, ಅವರಿಗೆ ಜಮೀನಿಲ್ಲ ಎಂದು ಹೇಳು ತ್ತೀರಾ ?

ಶ್ರೀ ಬಿ. ಡಿ. ಜತ್ತಿ.—1,200 ರೂಪಾಯಿಗಳವರೆಗೆ ಹಿಡುವಳಿದಾರರಿಗೆ ವಿನಾಯಿತಿಯಿದೆ. ಅವರಲ್ಲಿ ಜವಾನರು ಮತ್ತು ದಫೇದಾರರು ಬರುತ್ತಾರೆಂದು ನಾನು ತಿಳಿದಿದ್ದೇನೆ.

ಶ್ರೀ ವೈ. ವೀರಪ್ಪ.—ಎಲ್ಲಾ ಕಡೆಯಿಂದ ಬಂದ ವರಮಾನ 1,200 ರೂಪಾಯಿಗಳಿಗೆ ಮೀರದಿದ್ದರೆ ಮಾತ್ರ ಈ ಪರಿಮಿತಿಗೆ ಒಳಪಡುವುದಿಲ್ಲವೆಂದು ಹೇಳಿ ದ್ದೀರಿ. ಆ ಮನುಷ್ಯ ರಿಟೈರ್ ಆದಮೇಲೆ ಸ್ವಳಕ್ಕೆ ಹೋಗಿ ಜಮೀನಿನಮೇಲೆ ನಿಲ್ಲಬೇಕೆಂದಿರುತ್ತಾನೆ. ಅವನು ಮೃತನಾದರೆ ಅವನನ್ನೇ ನಂಬಿಕೊಂಡಿರುವ 10—12 ಜನ ಸಂಸಾರದವರಿರುತ್ತಾರೆ ಆಗ ಅವರಿಗೆ ನೀವು ಹೆಚ್ಚು ಜಮೀನು ಕೊಡುತ್ತೀರಾ ? ಅವನ ಹೆಂಡಿರು ಮಕ್ಕಳಿಲ್ಲದಾಗ ಜಮೀನಿನ ಹತ್ತಿರ ಹೋದಾಗ ಸರಿಯಾದ ವ್ಯವಸ್ಥೆ ಮಾಡುವುದಕ್ಕಾಗುತ್ತ ದೆಯೆ ? ಆದರಿಂದ ನಿಮ್ಮ ವಾದ, ಜಮೀನಿಲ್ಲದಿರುವ ವರಿಗೆ ಜಮೀನು ಹಂಚುತ್ತೇವೆಂದು ಹೇಳುವುದು ಖಂಡಿತವಾಗಿ ಜನರು ನಿರೀಕ್ಷೆಮಾಡಿಲ್ಲ. ರಾಜಕೀಯ ವಾತಾವರಣಕ್ಕೆ ತಕ್ಕಂತೆ ನೀವು ಮಾಡುತ್ತಿದ್ದೀರಿ.

Sri B. D. JATTI.—Such persons are exempted.

Sri Y. VEERAPPA.—I want to know from Sri Jatti where it is specifically stated that such persons are exempted from such a restriction.

Sri B. D. JATTI.—Such a person is entitled to take back his land when he retires or leaves his profession and comes back to his land. So, there is no difficulty.

Sri Y. VEERAPPA.—Will he and all his dependants be able to get sufficient quantity of yield from that piece of land. It is absolutely impossible.

ನಿಜವಾಗಿಯೂ ಕೂಡ ನೀವು ಧೈರ್ಯದಿಂದ, ಸ್ಥೈರ್ಯದಿಂದ, ಭಕ್ತಿಯಿಂದ, ನ್ಯಾಯದಿಂದ, ಧರ್ಮ ದಿಂದ ಈ ಸುಧಾರಣೆ ಮಾಡುವುದಾದರೆ ಬೇರೆ ಸೆಕ್ಟರ್‌ಗಳಲ್ಲೂ ಮಾಡಬೇಕಾಗಿತ್ತು. ಕಾಂಗ್ರೆಸ್ ಸಮಾಜವಾದದ ಮಾದರಿ ಸಮಾಜ ರಚನೆ ಮಾಡುವ ವೈಶಿಷ್ಟ್ಯ ಹೇಗಿದೆಯೆಂಬುದನ್ನು ನೋಡಬಹುದು. So far as the Socialist Party is concerned, the minimum income is Rs. 100 and the maximum income is Rs. 1,000 So far as the Congress Party is concerned, the minimum is Rs. 100 and the maximum is Rs. 3,000. ದೇಶದಲ್ಲಿ ಹಣದ ಅಭಾವವಿದೆ, ಆಹಾರದ ಅಭಾವವಿದೆ, ವರ್ಷಕ್ಕೆ 1½ ಕೋಟಿ ರೂಪಾಯಿಗಳ ಆಹಾರ ಆಮದುಮಾಡಬೇಕು, ಅಗ್ರಿ ಕಲ್ಚರಲ್ ಸೆಕ್ಟರ್ ಕೊನೆಗೆ ಬಿಟ್ಟು ಇತರೆ ಸೆಕ್ಟರ್ ಗಳನ್ನು ಮೊದಲೇಕೆ ಟ್ಯಾಪ್ ಮಾಡಬಾರದು ? ನಾನು ಸಾಮಾನ್ಯ ಹಿಡುವಳಿದಾರ, ಜನತೆಗೆ ತೊಂದರೆ ಯಾಗಬಾರದೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಕೇವಲ ಕೆಲವು ಜಮೀನುದಾರರು ತೊಂದರೆ ಕೊಟ್ಟಿರ ಬಹುದು. ಆದರೆ ಅದನ್ನೇ ನೆಪಮಾಡಿಕೊಂಡು ಕಾನೂ ನು ತಂದರೆ ಸರ್ವತೋಮುಖವಾಗಿ ನೆರವಾಗುವುದಿಲ್ಲ. ಈ ಬಗ್ಗೆ ಮೊದಲನೆಯ ಮತ್ತು ಎರಡನೆಯ ಪಂಚ ವಾರ್ಷಿಕ ಯೋಜನೆಗಳಲ್ಲಿ ಕೆಲವು ವಿಷಯ ಹೇಳಿದ್ದಾರೆ ಮತ್ತು ಶ್ರೀ ಜಿ. ಬಿ. ಪಂತ್‌ರವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅದನ್ನು ಈ ಸಭೆಯ ಗಮನಕ್ಕೆ ತರಲು ಪ್ರಯತ್ನಪಡುತ್ತೇನೆ. ಏಕೆಂದರೆ ಶ್ರೀ ಪಂತ್‌ರವರು ಹೇಳುವುದು ಅಧಾರಭೂತವಾಗಿ ತೆಗೆದುಕೊಳ್ಳುವ ಅಂಶ.

Sri Pant, the Home Minister at the Centre, has observed "land reforms should be uniform in all the Southern States and the Planning Commission should set up a committee to examine the existing land laws. Therefore, it is desirable that the land legislation should be postponed or abandoned."

ಶ್ರೀ ಎಂ. ಪಿ. ಪಾಟೀಲ್ (ರೆವಿನ್ಯೂ ಮಂತ್ರಿ ಗಳು).—ಇದನ್ನು ಯಾವಾಗ ಹೇಳಿದ್ದಾರೆ ?

ಶ್ರೀ ವೈ. ವೀರಪ್ಪ.—ಮಂತ್ರಿಗಳಾಗಿದ್ದಾಗ ಈ ವಿಚಾರ ವರ್ತಮಾನ ಪತ್ರಿಕೆಗಳಲ್ಲಿ ವರದಿಯಾಗಿದೆ. ತಪಶೀಲು ಬೇಕಾದರೆ ಆಮೇಲೆ ಹೇಳುತ್ತೇನೆ. ನೀವು ಈ ದಿವಸ ಕಾನೂನು ತರುವುದು ಬರೀ ಪುಸ್ತಕದ ಬದನೆಯಕಾಯಿ ಹೊರತು ಇನ್ನೇನೂ ಇಲ್ಲ.

Sri G. N. PUTTANNA (Tumkur).—I rise on a point of order. When an Hon'ble Member is expressing his views, is it right on the part of other Hon'ble Members to interrupt and disturb and make us lose the valuable suggestions that might be offered by him.

Mr. SPEAKER.—There is no point of order in it. As regards interruptions Hon'ble Members should exercise some amount of restraint. We cannot rule out interruptious altogether. Interruptions are natural in these discussions.

ಶ್ರೀ ವೈ. ವೀರಪ್ಪ.—ಈ fragmentationನಿಂದ ಆಗುವ ಅನಾಹುತಗಳು ಏನೆಂಬ ಬಗ್ಗೆ ಹೇಳುತ್ತೇನೆ. ಚೈನಾದೇಶದಲ್ಲಿ ಸುಮಾರು 11 ಕೋಟಿ ಎಕರೆ ಜಮೀನನ್ನು 33 ಕೋಟಿ ಜನತೆಗೆ 13 ಗುಂಟೆ ಪ್ರಕಾರ ಹಂಚಿದರು. ಆದರೆ ಈ ರೀತಿಯಾದ ಸುಧಾರಣೆ ಸಮಾಜಕ್ಕೆ ಸರಿಬೀಳಲಿಲ್ಲ, ಆದುದರಿಂದ ಅದನ್ನು ಬದಲಾಯಿಸಿಕೊಂಡು co-operative system of cultivation ಜಾರಿಗೆ ತಂದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ದೇಶದಲ್ಲೇ ಅಲ್ಲ, ಚೈನಾದೇಶದಲ್ಲಿ, ಅಮೆರಿಕಾ ದೇಶದಲ್ಲಿ ಎಲ್ಲರೂ ಕೂಡ ಭೂಮಿಯನ್ನೇ ಅವಲಂಬಿಸಿಕೊಂಡಿದ್ದಾರೆ. ಏನೋ ಒಂದು ವಾತಾವರಣದ ಪ್ರಯುಕ್ತ ಬೇರೆ ಬೇರೆ ಕಡೆ ಇರುವ ಪ್ರತಿಯೊಬ್ಬರಿಗೂ ಒಂದೊಂದು ರೀತಿ ಅನುಸರಣೆ ಇದೆ. ಈ ದೃಷ್ಟಿಯಿಂದ fragmentation ಮಾಡುವುದರಿಂದ ಬಹಳ ತೊಂದರೆ ಇದೆ. ಹತ್ತು ವರ್ಷಗಳಿಂದಲೂ ನಾವು ಆಹಾರದ ಅಭಾವವನ್ನು ನೀಗುತ್ತೇವೆಂದು ಯಂತ್ರೋಪಕರಣ, ಗೊಬ್ಬರ, ವಗೈರೆ ಒದಗಿಸಿದರು. ಇವೊತ್ತಿನ ದಿವಸ ಭೂಮಿಯನ್ನು ವ್ಯವಸಾಯಮಾಡುವವನಿಗೇ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ಅವನಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ವ್ಯವಸಾಯ ಮಾಡುವ ರೈತನು ಒಂದು ಜೊತೆ ಎತ್ತುಗಳನ್ನು ತೆಗೆದುಕೊಳ್ಳಲು ಹಣವನ್ನು ತೆಗೆದುಕೊಂಡು ಬಂದರೂ ಕೂಡ ಎತ್ತುಗಳು ಸಿಕ್ಕುತ್ತಿಲ್ಲ. ಹಸುಗಳನ್ನು ಉಪಯೋಗಿಸಿಕೊಂಡು ಭೂಮಿಯನ್ನು ಉಳುತ್ತಿದ್ದಾರೆ. ಸಾಗುವಳಿ ಮಾಡುವುದಕ್ಕೆ ಈಗ ಬಹಳ ತೊಂದರೆಯಾಗಿದೆ. ಯಾವ ಸಲಕರಣೆಗಳೂ, ಸೌಲಭ್ಯಗಳೂ ಇಲ್ಲದೆ ಇರತಕ್ಕ ಒಬ್ಬ ಮನುಷ್ಯನಿಗೆ ಜಮೀನನ್ನು ಕೊಟ್ಟರೆ ಅದರಿಂದ ಪ್ರಯೋಜನವೇನು ? ಸಾಗುವಳಿ ಮಾಡುವವರಿಗೆ ಎತ್ತುಗಳನ್ನೂ, ದನಗಳನ್ನೂ ಕೊಂಡುಕೊಂಡು ಕೊಡುತ್ತೇವೆಂದು ಸರ್ಕಾರದವರು ಹೇಳಿದರೂ ಸಹ, ನಮ್ಮಲ್ಲಿ ಅಷ್ಟು ದನಸಂಪತ್ತು ಇಲ್ಲ. ಇದನ್ನು ತೀಕ್ಷ್ಣವಾಗಿ ಪರಿಶೀಲನೆಮಾಡಬೇಕು. ನಮ್ಮಲ್ಲಿರುವ ಭೂಮಿಯನ್ನು ಸಾಗುವಳಿ ಮಾಡತಕ್ಕ ಯಾವ ಬಸವಣ್ಣ, ಯಾವ ಎತ್ತುಗಳು ಇವೆಯೋ ಅವು ನಮಗೆ ಬೇಕಾದಷ್ಟು ಸಂಖ್ಯೆಯಲ್ಲಿಲ್ಲ. ಅಂಥಾದ್ದರಲ್ಲಿ **fragmentation** ಮಾಡಿದಲ್ಲಿ ಲಾಭವಿದೆಯೋ ಅಥವಾ ಹಿಡುವಳಿದಾರರು ಅನೇಕ ಸೌಲಭ್ಯಗಳನ್ನಿಟ್ಟುಕೊಂಡು ಕೆಲಸಮಾಡುತ್ತಿರಬೇಕಾದರೆ ಲಾಭವಿದೆಯೆ ? ಹೀಗಿರುವಲ್ಲಿ ಜಮೀನುದಾರರಿಂದ ಭೂಮಿಯನ್ನು ವಶಪಡಿಸಿಕೊಂಡು ಅದನ್ನು ಹಂಚಿದರೆ ದೇಶದಲ್ಲಿ ಆಹಾರಾಭಾವವಲ್ಲದೆ ಇನ್ನೂ ಅನೇಕ ತೊಡಕುಗಳು ಬರುತ್ತವೆ. ಸರಿಯಾಗಿ ಮಳೆಯಾಗದೆ ವರ್ಷೇ ವರ್ಷೇ ಆಕಾಶದ ಕಡೆಗೆ ಬಾಯಿ ತೆರೆದುಕೊಂಡಿರಬೇಕಾಗುತ್ತದೆ.

ಸೀಲಿಂಗ್ ವಿಚಾರ ತೆಗೆದುಕೊಂಡರೆ 400 ರೂಪಾಯಿಗಳ ನಿವ್ವಳ ವರಮಾನ ಬರುವುದಕ್ಕೆ ಮೂಲಹಿಡುವಳಿ ಎಂದು. ಅದರ ಮೂರರಷ್ಟು ಎಂದರೆ 1,200 ರೂಪಾಯಿಗಳ ನಿವ್ವಳ ವರಮಾನ ಕುಟುಂಬ ಹಿಡುವಳಿ ಎಂದುಮಾಡಿದ್ದಾರೆ. ಕುಟುಂಬ ಹಿಡಿವಳಿಯ ನಾಲ್ಕುವರೆಯಷ್ಟು ಎಂದರೆ 5,400 ರೂಪಾಯಿಗಳು ಸೀಲಿಂಗ್ ಎಂದೂ ಮಾಡಿದ್ದಾರೆ. ಜಮೀನಿನಿಂದ ಬರುವ 5,400ರೂಪಾಯಿ ವರಮಾನದಲ್ಲಿ ರೈತ ಯಾವ ಯಾವ ಬಾಬುಗಳ ಮೇಲೆ ಖರ್ಚುಮಾಡಬೇಕಾಗಿದೆ, ಎಂದರೆ ಮಗನ ವಿದ್ಯಾಭ್ಯಾಸ, ಮಕ್ಕಳ ಮದುವೆ, ಮತ್ತು ಇನ್ನೂ ಅನೇಕಾನೇಕ ಬಾಬುಗಳ ಮೇಲೆ ಖರ್ಚುಮಾಡಬೇಕಾಗುತ್ತದೆ. ನಾವು ಬೇರೆ ಕ್ಷೇತ್ರಗಳನ್ನು ತೆಗೆದುಕೊಂಡರೆ, ಎರಡುಕೋಟಿ-ಮೂರುಕೋಟಿ ವರಮಾನ ಬರುವವರೂ ಇದ್ದಾರೆ. ಇಂಥವರನ್ನು ಬಿಟ್ಟು ಕೇವಲ ವ್ಯವಸಾಯವನ್ನು ಮುಖ್ಯಾಧಾರವಾಗಿ ಇಟ್ಟುಕೊಂಡಿರತಕ್ಕ ಹಿಡುವಳಿದಾರರನ್ನು disturb ಮಾಡುವುದು ಸಮಾಜಕ್ಕೆ ಕ್ಷೇಮವಲ್ಲ, ಬೇರೆ ಕ್ಷೇತ್ರಗಳಲ್ಲಿ ಮೊದಲು tap ಮಾಡಿ ಪರಿಪೂರ್ಣವಾದ ಶಾಂತವಾತಾವರಣವನ್ನು ರಚಿಸಿ, ಸರ್ವತೋಮುಖವಾದ ಸಹಕಾರವನ್ನು ಪಡೆದುಕೊಂಡು, ನಾವು ಪ್ರತಿಯೊಬ್ಬರನ್ನೂ ಒಂದೇ ದೃಷ್ಟಿಯಲ್ಲಿ ನೋಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುವುದರಿಂದ ನಿಮ್ಮಗಳ ಬೆಂಬಲವನ್ನೂ ಕೊಡಿ ಎಂದು ಕೊನೆಯದಾಗಿ land reforms ತಂದರೆ ಖಂಡಿತವಾಗಿಯೂ ಬೆಂಬಲ ಸಿಕ್ಕುತ್ತದೆ. ಇವೊತ್ತಿನ ದಿವಸ ಕಾಂಗ್ರೆಸ್‌ನಲ್ಲಿರತಕ್ಕ ಸದಸ್ಯರೇ ಇದರ ವಿರೋಧವಾಗಿ ಮಾತನಾಡುವ ಕಾರಣವೇನು ? ಇದಕ್ಕೆ ಹನ್ನೊಂದು ವರ್ಷಗಳ ಆಡಳಿತಾನುಭವದ ಕಹಿಯೇ ಕಾರಣವೆಂದು ಹೇಳಬೇಕಾಗಿದೆ. ಸೀಲಿಂಗ್ ವಿಧಾಯಕ ಮಾಡುವಾಗಲೂ ಕೂಡ ನಮ್ಮ ಪಕ್ಷದವರು ಮೂಲಹಿಡುವಳಿ 500 ರೂಪಾಯಿಗಳಿರಬೇಕು ; ಅದರ ನಾಲ್ಕರಷ್ಟು ಎಂದರೆ 2000 ರೂಪಾಯಿಗಳು ಒಂದು ಕುಟುಂಬ ಹಿಡುವಳಿಯಾಗಿರಬೇಕು. ಕುಟುಂಬ ಹಿಡುವಳಿಯ ನಾಲ್ಕೂವರೆಯಷ್ಟು ಎಂದರೆ ಒಂಭತ್ತು ಸಾವಿರ ರೂಪಾಯಿಗಳು ಸೀಲಿಂಗ್ ಆಗಿ ಇರಬೇಕು ಎಂದು ತೀರ್ಮಾನಿಸಿದ್ದೇವೆ. ಇಷ್ಟೊಂದು ಇಲ್ಲದೆ ಇದ್ದರೆ ರೈತ ತನ್ನ ಮಗನನ್ನು ವಿದ್ಯಾವಂತನನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ, ರೈತ ತನಗೆ ಒದಗುವ ಅನೇಕ ಖರ್ಚುಗಳನ್ನು ಎದುರಿಸುವುದಕ್ಕಾಗುವುದಿಲ್ಲ. ನಾನು ಮೇಲೆ ಹೇಳಿರುವಂತೆ ಕುಟುಂಬ ಹಿಡುವಳಿ ಮಾಡಬೇಕು ಎಂದು ಹೇಳುತ್ತೇನೆ.

ಒಂದು ನಿರ್ದಿಷ್ಟವಾದ family unit ಎಂದರೆ ಐದು ಜನರಿರತಕ್ಕ ಕುಟುಂಬವೆಂದು ಪರಿಗಣಿಸಿದ್ದಾರೆ. ಆದರೆ ಹಿಂದೂಸ್ಥಾನದಲ್ಲಿ, ಹಿಂದೂಸಮಾಜದಲ್ಲಿ 200-250 ಜನರಿರುವ ಸಂಸಾರಗಳೂ ಇವೆ. ಅದನ್ನು Co-operative farming ಎಂದು ಪರಿಗಣಿಸಬೇಕಾಗಿದೆ. ಐದು ಜನರಿರತಕ್ಕ ಒಂದು ಕುಟುಂಬಕ್ಕೆ ನಾವು ಸೂಚನೆ ಮಾಡುವ ರೀತಿಯಲ್ಲಿ ಒಂದು ನಿರ್ದಿಷ್ಟವಾದ ಪರಿಮಿತಿ ಮತ್ತು ಐದು ಜನಕ್ಕೆ ಮೇಲ್ಪಟ್ಟು ಯಾವ ಸಂಸಾರದಲ್ಲಿ ಇರುತ್ತಾರೆಯೋ ಅವರಿಗೆ ಒಬ್ಬೊಬ್ಬರಿಗೆ ಒಂದು basic holding ಇರುವಂತೆಮಾಡ

(ಶ್ರೀ ವೈ. ವೀರಪ್ಪ)

ಬೇಕು. ಮುಂದೆ ತರುವ ಕಾನೂನಿನಲ್ಲಿ ಈ ರೀತಿ ತಿದ್ದುಪಡಿಮಾಡಬೇಕು. Future acquisitionsಗೆ ಮಾತ್ರ ಕುಟುಂಬ ಹಿಡುವಳಿಯ ಮೂರರಷ್ಟು ಮಾತ್ರ ಮಿತಿಯಾಗಿರಬೇಕು ಎಂದು ತಿಳಿಸಿದ್ದಾರೆ. ಅವರಿಗೂ ಕೂಡ ಇತರರಿಗಿರುವಂತೆಯೇ ಮಿತಿ ಇರಬೇಕು. ನಮ್ಮ ಮಾನ್ಯ ಮಿತ್ರರು ಈಗಾಗಲೇ ತಿಳಿಸಿರುವಂತೆ reasonable standardನಲ್ಲಿ ಜೀವನ ಮಾಡಬೇಕಾದರೆ ಅವನಿಗೆ ತಕ್ಕ ವರಮಾನವಿರಬೇಕು. ಆದ್ದರಿಂದ future acquisitions ಮಾಡಿಕೊಳ್ಳುವ ಸಂದರ್ಭಗಳಲ್ಲಿ ಕುಟುಂಬ ಹಿಡುವಳಿಯ ಮೂರರಷ್ಟು ಎಂದು ನಿಗದಿ ಮಾಡಿರುವುದರಿಂದ ಅತೃಪ್ತಿ ಇದೆ. ಇದನ್ನು ಬದಲಾಯಿಸಬೇಕು.

ಹಣವನ್ನು ಎಲ್ಲಿಂದ ತರುತ್ತಾರೆ, ಹೇಗೆ ಕೊಡುತ್ತಾರೆ ಎನ್ನುವ ಪ್ರಶ್ನೆ ಜಮೀನನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಬರುತ್ತದೆ. ಕಷ್ಟಪಟ್ಟು ಕೆಲಸ ಮಾಡಿ, ಜವಾನನ ಕೆಲಸವನ್ನು ಮಾಡಿಕೊಂಡು ತಿಂಗಳಿಗೆ 30 ರೂಪಾಯಿಗಳ ಸಂಬಳ ಬಂದರೆ ಅದರಲ್ಲಿ 20 ರೂಪಾಯಿಗಳನ್ನು ತಾನು ಖರ್ಚುಮಾಡಿಕೊಂಡು 10 ರೂಪಾಯಿಗಳಂತೆ ಉಳಿತಾಯಮಾಡಿ ಮುಂದೆ ಮುಪ್ಪಿನ ಕಾಲಕ್ಕೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ಅವನು ಕೂಡಿಸಿಟ್ಟಿರುವ ಹಣವನ್ನು ಕೊಟ್ಟು ಜಮೀನನ್ನು ಕೊಂಡುಕೊಂಡಿರುತ್ತಾನೆ. ಅದನ್ನು ಇವೊತ್ತಿನ ದಿವಸ ನೀವು ತೆಗೆದುಕೊಂಡು ಬಿಟ್ಟು ಮಾಲೀಕರಿಗೆ ಸರಿಯಾದ ಕಾಂಪೆನ್‌ಸೇಷನ್ ಕೊಡದೆ ಇದ್ದರೆ ಅದು ಯಾವ ಧರ್ಮ? ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಿಲ್ಲ. ಹೀಗಿರುವಾಗ ಭೂಮಾಲೀಕನಿಗೆ ಸರಿಯಾದ ಪರಿಹಾರವನ್ನು ಕೊಡದೆ ಇದ್ದರೆ ಅವನ ಗತಿ ಏನು! ಅವನು ಬೇರೆ ಉದ್ಯಮವನ್ನು ಮಾಡಿಕೊಂಡು ಜೀವನವನ್ನು ನಡೆಸಬೇಕಾದರೆ ಹಣ ಬೇಡವೇ! ನೀವು ನಿಜವಾಗಿಯೂ ಕೂಡ ಜನಸಾಮಾನ್ಯರಿಗೆ ಸಹಾಯ ಮಾಡುತ್ತೇವೆ ಎಂದು ಅನುಕಂಪ ಮತ್ತು ಪರಿತಾಪದಿಂದ ಅವರ ಕಷ್ಟ ಸುಖಗಳನ್ನು ಪರಿಹರಿಸುತ್ತೇವೆ ಎನ್ನುವುದಾದರೆ ಆಹಾರ ಪದಾರ್ಥಗಳ ಧಾರಣೆಗಳನ್ನು ಇಳಿಸಿ ದೇಶವನ್ನು ಸಾಲದ ಹೊರೆಯಿಂದ ನಿವೃತ್ತಿಮಾಡಬೇಕೆನ್ನುವ ಅಭಿಲಾಷೆ ಇದ್ದರೆ richer circle ಯಾವುದಿದೆ ಅದನ್ನೆಲ್ಲ tap ಮಾಡಿ. ನಾವು ನಿಮಗೆ support ಮಾಡುತ್ತೇವೆ. ಅದನ್ನು ಮಾಡದೆ ಯಾವುದೋ ಒಂದು ಕಾನೂನನ್ನು ಜಾರಿಗೆ ತಂದರೆ ಸಾವಿರಾರು ವರ್ಷಗಳಿಂದ ಬಂದಂಥ ಜಟಿಲವಾದ ಸಮಸ್ಯೆಯನ್ನು ಶ್ರೀನಿವಾಸ ಮಿತಿಯವರ ಸಲಹೆಗಳ ಪ್ರಕಾರ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ನಾವು ತಿಳಿಸಿರುವ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು ಅದರಿಂದ ದೇಶಕ್ಕೆ ಧಕ್ಕೆ ಒದಗುತ್ತದೆಯೇ, ಅನುಕೂಲವಾಗುತ್ತದೆಯೇ ಎಂಬುದನ್ನು ನೋಡಿ ಆ ದೃಷ್ಟಿಯಿಂದ land reforms ಹೇಗೆ ಮಾಡಲಿಕ್ಕೆ ಬರುತ್ತದೆಂದು ನೋಡಬೇಕು. ಬೇರೆ ಕ್ಷೇತ್ರಗಳಲ್ಲಿ ಮೊದಲು tap ಮಾಡಿ ಕೊನೆಗೆ land reforms ಜಾರಿಗೆ ತಂದರೆ 'ಸರ್ವೇಜನಾಃ ಸುಖಿನೋಭವಂತು' ಎನ್ನುವುದಕ್ಕೆ ಅರ್ಥ ಬಂದಂತಾಗುತ್ತದೆಂದು ಹೇಳಬೇಕಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಮಹಾತ್ಮ ಗಾಂಧಿಯವರು ಎಲ್ಲರೂ ಹಳ್ಳಿಯ ಕಡೆಗೆ ಹೋಗಬೇಕು ಎಂದು ಹೇಳುತ್ತಿದ್ದರು. ಇವೊತ್ತಿನ ದಿವಸ ಸರಿಯಾದ ಕೌಶಲ್ಯ, ವಿಜ್ಞಾನಿಕಜ್ಞಾನ, ಪರಿಪೂರ್ಣವಾದ ವಿದ್ಯೆಹೊಂದಿರುವ ವಿದ್ಯಾರ್ಥಿಗಳಿಗೆ ಹಳ್ಳಿಯಲ್ಲಿ ಅವಕಾಶವಿಲ್ಲ. ಅವರು ಅರ್ಬನ್ ಪ್ರದೇಶದ ಕಡೆ ಹೊರಟುಹೋಗುತ್ತಿದ್ದಾರೆ. ತಮ್ಮ ಭೂಮಿ ಬೇರೆಯವರಿಗೆ ಹೋಗುತ್ತದೆಂದು ಡಾಕ್ಟರುಗಳು, ಇಂಜನಿಯರುಗಳು, ಹಳ್ಳಿಯಕಡೆಯಿಂದ ನಗರದ ಕಡೆಗೆ ಹೋಗುತ್ತಾರೆ. ಇದನ್ನು ಆಕ್ರೋಶದಿಂದ ಹೇಳುತ್ತಿಲ್ಲ. ಜನತೆಯ ಮೇಲೆ ಇದು ದುಷ್ಪರಿಣಾಮವನ್ನು ಮಾಡುತ್ತಿದೆ. ಇದಕ್ಕೆ ರಾಜಕೀಯ ಬಣ್ಣ ಕೊಟ್ಟಂತೆ ಇದೆ. ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಸಿಂಪಲ್ ಮಾರ್ಟ್‌ಗೇಜ್ ಮತ್ತು ಯೂಸುಫ್ರಕ್ಚರಿ ಮಾರ್ಟ್‌ಗೇಜ್ ಎರಡಕ್ಕೂ ಅವಕಾಶವಿತ್ತು, ವರದಿಯಲ್ಲಿ ಸಿಂಪಲ್‌ಮಾರ್ಟ್‌ಗೇಜನ್ನು ಸಾಗುವಳಿ ಮಾಡದೆ ಇರುವವನಿಗೆ ಮಾಡಬಹುದು; ಯೂಸುಫ್ರಕ್ಚರಿ ಮಾರ್ಟ್‌ಗೇಜನ್ನು ಸಾಗುವಳಿಮಾಡುವವನಿಗೆ ಮಾಡಬೇಕು ಎಂದು ಹೇಳುತ್ತೀರಿ. ಈ ಸಂದರ್ಭದಲ್ಲಿ ಜಮೀನುಗಳನ್ನು ಕೊಟ್ಟು ಕಷ್ಟಗಳನ್ನು ಪರಿಹರಿಸಿಕೊಳ್ಳಬೇಕಾದರೆ ಏನು ವ್ಯವಸ್ಥೆ ಮಾಡಿದ್ದೀರಿ! ಜಮೀನು ವರ್ಗಾವಣೆ ಮಾಡಬೇಕೆನ್ನುವವರು ಸಾಗುವಳಿ ಮಾಡುವವನು ಸಿಗದಿದ್ದರೆ ಎಲ್ಲಿಗೆ ಹೋಗಬೇಕು! ಈ ದೃಷ್ಟಿಯಿಂದ ಈ ಜಮೀನು ವರ್ಗಾವಣೆ ವಿಚಾರದಲ್ಲಿ ಒಂದು ನಿರ್ಬಂಧವನ್ನು ಹಾಕಿರುವುದು ಸರಿಯಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿನವರು ಅನೇಕ ಜಮೀನುಗಳನ್ನು ಅಡಮಾಡಿಕೊಂಡು ರೈತರಿಗೆ ಲಾಂಗ್ ಟರ್ಮ್ ಲೋನ್ ಕೊಟ್ಟು ಅವರ ಕಷ್ಟ ನಿವಾರಣೆ ಮಾಡುತ್ತಾ ಇದ್ದಾರೆ. ಈಗಿನ ಸಲಹೆ ಪ್ರಕಾರ ರೂರಲ್ ಕ್ರೆಡಿಟ್ ಅನ್ನುವುದೇ ಹೋಗುತ್ತದೆ. ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕುಗಳಲ್ಲಿ ಜಮೀನುಗಳನ್ನು ಆಧಾರಮಾಡಿಕೊಂಡು ಸಾಲಕೊಡುವ ಸೌಲಭ್ಯವಿರಬೇಕು. ಸಾಲ ಬರದೇ ಇದ್ದರೆ, ಜಮೀನುಗಳನ್ನು ಹರಾಜು ಮಾಡಲಿ, ಸಹಕಾರ ಪದ್ಧತಿಯಲ್ಲಿ ಜಮೀನನ್ನು ಇಟ್ಟುಕೊಂಡು, ಬೇರೆಯವರಿಗೆ ಒಂದು ವ್ಯಾಪಾರಮಾಡಿಕೊಡುವುದಕ್ಕೆ ಅವಕಾಶಮಾಡಿಕೊಡಬೇಕು. ನಿಮ್ಮ ಸುಧಾರಣೆಗಳಲ್ಲಿ ಬೇಕಾದಷ್ಟು ಲೋಪದೋಷಗಳಿವೆ. 1 :10 ದಾಮಾಷಾವನ್ನು ಬೇರೆ ಸೆಕ್ಟರುಗಳಲ್ಲಿ ಅಡಾಪ್ಟ್ ಮಾಡಿ.

ಈ ಕಾಫಿ ಎಸ್ಟೇಟುಗಳು ಫಾರಿನ್ ಎಕ್ಸ್‌ಚೇಂಜ್ ತರುವುದಕ್ಕಾಗುವುದಿಲ್ಲ. ಈ ತೋಟಗಳ ಕೆಲಸಗಾರರಿಗೆ ಲೇಬರ್ ಆಕ್ಟ್ ಮೂಲಕ ಅನೇಕ ಸೌಲಭ್ಯಗಳಿವೆ. ಕೆಲಸಗಾರರು, ಪ್ಲಾಂಟರ್ಸ್ ಮತ್ತು ಸರ್ಕಾರದವರು ಒಂದು ಒಪ್ಪಂದಕ್ಕೆ ಬಂದು ಕೆಲಸಗಾರರಿಗೆ 10 ಲಕ್ಷ ರೂಪಾಯಿ ಪರಿಹಾರ ದೊರಕಿತು. ಇದು ಗುಡ್ಡಗಾಡು ಪ್ರದೇಶಗಳಲ್ಲಿ ಮಾಡತಕ್ಕ ವ್ಯವಸಾಯ, ಇದು ಫ್ಲವರಿಂಗ್ ಸೀಸನ್‌ನಲ್ಲಿ ಆಗಬೇಕು, ಇತ್ಯಾದಿ ಕಾರಣಗಳಲ್ಲ, ಇದಕ್ಕೆ ವಿನಾಯಿತಿ ಕೊಡಬೇಡಿ.

ನಿಮ್ಮ ವರಮಾನದ ದೃಷ್ಟಿಯಿಂದಲೂ ಇದನ್ನು ತರಬೇಡಿ. ಸಾಲ ಮಾಡಬೇಕಾಗುತ್ತದೆ. ಈ ಸಾಲವನ್ನು ನಿಮ್ಮ ಮೇಲೆ ಹೊರಿಸಬೇಕಾಗುತ್ತದೆ. ಈ ಎಲ್ಲಾ ವಿಚಾರಗಳನ್ನೂ ನೀವು ಒಬ್ಬೊಬ್ಬರೇ ಇದ್ದಾಗ ತೀಕ್ಷ್ಣವಾಗಿ ಯೋಚನೆಮಾಡಿ. ಮನೆಯಲ್ಲಿ ಒಬ್ಬರೇ ಯೋಚನೆಮಾಡಿ. ರಾವ್‌ಬಹದ್ದೂರ್ ಸಿಂಗ್ ಅವರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ. ಆ ಸಮಿತಿಯವರು ರಾಜ್ಯದಲ್ಲಿ ಟೂರುಮಾಡಿ ಜನಗಳ ಕಷ್ಟ ಸುಖ ಏನಿದೆ ಎಂದು ಅರಿತು ಒಂದು ತೀರ್ಮಾನಕ್ಕೆ ಬರಲಿ. ಅವರ ಅಭಿಪ್ರಾಯದ ಮೇಲೆ ಒಂದು ಬದಲಾವಣೆಯನ್ನು ಮಾಡುವುದು ಉಚಿತ. ಈ ಪರಿಸ್ಥಿತಿಯಲ್ಲಿ ಬದಲಾವಣೆ ಮಾಡಿದರೆ ನಿಮ್ಮ ಬೆನ್ನು ಹಿಂದಕ್ಕೆ

ಭರ್ಜಿ ಬರುತ್ತದೆ. ಹಸುವಿನ ಕೆಚ್ಚಲಿನಲ್ಲಿ ಇರುವ ಉಣ್ಣೆಯನ್ನು ತೆಗೆದುಕೊಳ್ಳುವುದಕ್ಕೆ ಹೋಗಿ ಹಸುವಿನ ಕೆಚ್ಚಲನ್ನೆ ಕತ್ತರಿಸುವ ಹಾಗಾಗುತ್ತದೆ. ಆಹಾರದ ಅಭಾವ ಇದೆ. ಹಣದ ಅಭಾವ ಇದೆ. ದೇಶದಲ್ಲಿ ಎಲ್ಲೆಲ್ಲಿಯೂ ಸಾಲವಾಗುತ್ತಿದೆ. ಈ ಸುಧಾರಣೆಗಳಿಂದ ಜನರ ಸ್ಥಿತಿಗತಿ ಉತ್ತಮವಾಗುವುದಿಲ್ಲ ಎಂದು ಹೇಳಿ ಅಧ್ಯಕ್ಷರಿಗೆ ಅನಂತ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ವಿಷಯದಲ್ಲಿ ಚರ್ಚೆಗೆ ಇದೇ ಕೊನೆಯ ದಿವಸ. ಒಂದು ಸೂಚನೆ ಮಾಡುತ್ತೇನೆ. ಯಾರು ಈ ಚರ್ಚೆಯಲ್ಲಿ ಭಾಗವಹಿಸಲಿಲ್ಲವೋ ಅವರು ಬಡ್ಜೆಟ್ ಕಾಲದಲ್ಲಿ ಈ ವಿಷಯದ ಮೇಲೆ ಮಾತನಾಡಲು ಅವಕಾಶ ಕೊಡುತ್ತೇನೆ. ಆವಾಗ ಮಾತನಾಡಬಹುದು. ಬಡ್ಜೆಟ್ ಮೇಲಿನ ಚರ್ಚೆಗೆ ಐದು ದಿವಸ ಮೀಸಲಾಗಿದೆ. ಈ ಭೂಸುಧಾರಣೆ ವಿಷಯದಲ್ಲಿ ಈಗಾಗಲೇ ಸದಸ್ಯರು 10 ದಿವಸ ಮಾತನಾಡಿದ್ದಾರೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಇದ್ದೆ. ಕಾಲವಿಲ್ಲದ ಕಾರಣ ನಾನು ಬಹಳ ದುಃಖದಿಂದ ಈ ಚರ್ಚೆಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಹೇಳಬೇಕಾಗಿದೆ. ಬಡ್ಜೆಟ್ ಕಾಲದಲ್ಲಿ ಈವಾಗ ಯಾರಿಗೆ ಮಾತನಾಡಲು ಅವಕಾಶ ಸಿಕ್ಕಿರಲಿಲ್ಲವೋ ಅವರು ಆವಾಗ ಮಾತನಾಡಬಹುದು.

ಒಬ್ಬ ಸದಸ್ಯರು.—ಇವೊತ್ತು ಒಬ್ಬೊಬ್ಬ ಸದಸ್ಯರಿಗೆ ಐದು ನಿಮಿಷ ಕೊಟ್ಟರೆ ಸಾಕು.

ಶ್ರೀ ಜಿ. ಎನ್. ಪುಟ್ಟಣ್ಣ.—ಇವತ್ತು ಚರ್ಚೆ ಮುಂದುವರಿಸಲು ಆಗುವುದಿಲ್ಲ.

ಅಧ್ಯಕ್ಷರು.—ಐದು ನಿಮಿಷ ಕೊಡುವುದು ನ್ಯಾಯವಾಗುತ್ತದೆಯೇ ?

ಶ್ರೀ ಮಾರಣ್ಣನವರೇ, ತಾವು ಚೆನ್ನಾಗಿ ಮಾತನಾಡುತ್ತೀರಿ, ಐದು ನಿಮಿಷದಲ್ಲಿ ಹೇಗೆ ಹೇಳುತ್ತೀರಿ ? ಯಾರಿಗೂ ಐದು ನಿಮಿಷದಲ್ಲಿ ಸಾಧ್ಯವಾಗುವುದಿಲ್ಲ. 45 ನಿಮಿಷ ಶ್ರೀ ವೀರಪ್ಪನವರು ತೆಗೆದುಕೊಂಡಿದ್ದಾರೆ. ಯಾರಿಗಾದರೂ ಈ ವಿಷಯ ಮಾತನಾಡಲು ಅರ್ಧ ಗಂಟೆಯಾದರೂ ಬೇಕಾಗುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಒಂದು ದಿವಸ ಎಕ್ಸ್‌ಟೆಂಡ್ ಮಾಡಬೇಕು.

ಅಧ್ಯಕ್ಷರು.—ಒಂದು ದಿವಸ ಹೆಚ್ಚಿಸಿದರೆ ಇನ್ನೊಂದು ದಿವಸ ಮತ್ತೆ ಹೆಚ್ಚು ಮಾಡಬೇಕಾಗುವ ಪ್ರಸಂಗ ಬಂದರೂ ಬರಬಹುದು. ಆದರೆ ಇದೇ ವಿಷಯವನ್ನು ಬಡ್ಜೆಟ್ಟಿನ ಕಾಲದಲ್ಲಿ ಮಾತನಾಡಬಹುದು. ಈಗ ಯಾರಿಗೂ ಸಮಯವಿಲ್ಲ. ಒಂದು ಘಂಟೆ ಹೊಡೆಯಿತು.

Sri M. P. PATIL.—I take it that the discussion is closed.

Mr. SPEAKER.—Yes.

Sri M. P. PATIL.—Sir, I am very much thankful to the Hon'ble Members for making valuable suggestions on land reforms. Sir, as you are aware, the Jatti Committee report was submitted to this House for giving an opportunity to all the Hon'ble Members to express their views on the various recommendations made by that committee so that the Government will have the opportunity to take the views expressed by the Hon'ble Members into consideration while framing the Bill.

I am thankful to all of them for making these suggestions and I can assure them that the suggestions made by them will be given due weight while the Bill is framed. I hope and expect that the Bill will be framed as early as possible and placed before this House for the consideration of the Hon'ble Members.

Mr. SPEAKER.—Before we rise, I should like to announce one matter. During this session, 48 members have taken part in the discussion on the Jatti Committee Report, out of whom 20 are from the Opposition. I have always heard the Opposition Members saying 'I did not get a chance or he did not get a chance'. I am very sorry that I am not able to accommodate all the members, but I think full justice has been done so far as the subject is concerned. Taking into account the number that spoke last year, 56 members have spoken in all. I think this is a fairly good number.

The House now rises and will meet on Tuesday, the 1st April at One o' Clock.

The House adjourned at Three Minutes past One of the Clock to meet again at One of the Clock on Tuesday, the 1st April 1958.